# ಉಪನಿಷತ್ತುಗಳ ಮೊದಲನೆಯ ಪರಿಚಯ

ಪ್ರಕಾಶಕರು
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
2001

## ನಮ್ಮ ಕೆಲವು ಅಧ್ಯಾತ್ಮಗ್ರಂಥಗಳು

(ಶ್ರೀಶ್ರೀಗಳವರ ಉಪನ್ಯಾಸಗಳು)

೧. ವೇದಾಂತವೂ ಆಧುನಿಕಜನಜೀವನವೂ : ವೇದಾಂತದಿಂದ ಈಗಿನ ಜನ ಜೀವನಕ್ಕೆ ಏನಾದರೂ ಪ್ರಯೋಜನವುಂಟೆ ? ಎಂಬ ಪ್ರಶ್ನೆಗೆ ಉತ್ತರವಿರುವ ಮೂರು ಉಪನ್ಯಾಸಗಳಿವೆ.

ಮೊದಲನೆಯ ಮುದ್ರಣ : 1954 : ಪು. ಕ್ರೌ 2+46

೨. ಅನುಭವಪರ್ಯಂತವಾದ ಆತ್ಮವಿಚಾರ : ಶ್ರುತಿ, ಆಗಮ, ತರ್ಕ-ಇವುಗಳ ಮರ್ಮವನ್ನು ಪ್ರತಿಪಾದಿಸಿ ಆತ್ಮಸ್ವರೂಪವನ್ನು ಅನುಭವದಲ್ಲಿ ಮನಗಾಣಿಸಿಕೊಡುವ ಆರು ಉಪನ್ಯಾಸಗಳಿವೆ.

ಎರಡನೆಯ ಮುದ್ರಣ : 1980 : ಕ್ರೌ 6+66

೩. ಪರಿಪೂರ್ಣದರ್ಶನ : ಆಚಾರ್ಯರ ಮತಾನುಸಾರಿಯಾದ ವೇದಾಂತ ಸಿದ್ಧಾಂತವೊಂದೇ ಪರಿಪೂರ್ಣದರ್ಶನವೆಂಬುದನ್ನು ಎಂಟು ಉಪನ್ಯಾಸಗಳಲ್ಲಿ ಪ್ರತಿಪಾದಿಸಿದೆ. ಎರಡನೆಯ ಮುದ್ರಣ : 1983 ಪು. ಕ್ರೌ 4+58

೪. ಸರ್ವವ್ಯವಹಾರಾತೀತವಾದ ಪರಮಾರ್ಥ : ಸಕಲವ್ಯವಹಾರಾತೀತನಾದ ಪರಮಾತ್ಮನಲ್ಲಿ ನೆಲೆನಿಲ್ಲುವ ಪರಮಾನುಭವವೇ ಪರಮಾರ್ಥವಿದ್ಯೆ ಎಂಬುದನ್ನು ತಿಳಿಸುವ ಎಂಟು ಉಪದೇಶಗಳಿವೆ.

ಎರಡನೆಯ ಮುದ್ರಣ 1990 : ಪು. ಕ್ರೌ 4 + 48

೫. ಬ್ರಹ್ಮವಿದ್ಯೆ : ಲೌಕಿಕವಿದ್ಯೆಗಳಿಗಿಂತ ಬ್ರಹ್ಮವಿದ್ಯೆಯು ಯಾವ ಅಂಶಗಳಲ್ಲಿ ವಿಲಕ್ಷಣವಾಗಿದೆ ? ಎಂಬುದನ್ನೂ, ಸಾಧನಸಿದ್ಧಾಂತಗಳ ರಹಸ್ಯಗಳನ್ನೂ ವಿವರಿಸುವ ಏಳು ಉಪನ್ಯಾಸಗಳಿವೆ.

ಎರಡನೆಯ ಮುದ್ರಣ 1983 : ಪು. ಕ್ರೌ 4+60

೬. ಅಧ್ಯಾತ್ಮವಿದ್ಯೆ : 1964ನೆಯ ವರ್ಷದ ಚಾತುರ್ಮಾಸ್ಯ ಕಾಲದಲ್ಲಿ ಶ್ರೀಶ್ರೀಗಳವರು ಹೊಳೆನರಸೀಪುರದಲ್ಲಿ ಅನುಗ್ರಹಿಸಿದ ಇಪ್ಪತ್ತಾರು ಉಪನ್ಯಾಸಗಳಿವೆ. ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದ ತಾತ್ಪರ್ಯವನ್ನು ತಿಳಿಯಲು ಸಹಾಯಕವಾದ ಅಮೂಲ್ಯವಿಷಯಗಳಿವೆ.

ಎರಡನೆಯ ಮುದ್ರಣ 1992 : ಪು. ಡೆಮ್ಮಿ 6+ 158

ಅಧ್ಯಾತ್ಮಗ್ರಂಥಾವಳಿ

# ಉಪನಿಷತ್ತುಗಳ ಮೊದಲನೆಯ ಪರಿಚಯ

ಬರೆದವರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : ೭೧

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
2001

| | | |
|---|---|---|
| ಮೊದಲನೆಯ ಮುದ್ರಣ | 1941 | ( 1000 ಪ್ರತಿಗಳು) |
| ಎರಡನೆಯ ಮುದ್ರಣ | 1974 | ( 1000 '' ) |
| ಮೂರನೆಯ ಮುದ್ರಣ | 1995 | ( 1000 '' ) |
| ನಾಲ್ಕನೆಯ ಮುದ್ರಣ | 2001 | (2000 '' ) |

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು.
All Rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೨೧೩, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೭೬೭೦೧೬

ಮುದ್ರಕರು :
**ಪ್ರಾಜ್ಞಪ್ರಿಂಟರ್ಸ್**
ನಂ. ೨೨೨, ಗೌಡನಪಾಳ್ಯ ಮುಖ್ಯರಸ್ತೆ
ಬೆಂಗಳೂರು - ೬೧
ದೂರವಾಣಿ : ೬೬೬೨೨೩೨

# ಬಿನ್ನಹ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿಯೇ ಬರೆದು ಪ್ರಕಟಿಸಿದ್ದ ಈ ಪುಸ್ತಕವು ಈಗ ನಾಲ್ಕನೆಯ ಬಾರಿಗೆ ಪುನರ್ಮುದ್ರಿತವಾಗಿ ಹೊರಬಂದಿದೆ. ಈ ಪುಸ್ತಕವು ಭಾಷ್ಯಸಂಪ್ರದಾಯಾನುಗುಣವಾಗಿ ಉಪನಿಷದ್ವಿಚಾರವನ್ನು ಮಾಡಬೇಕೆಂಬ ಪ್ರಚೋದನೆಯನ್ನು ವಾಚಕರಲ್ಲಿ ಉಂಟುಮಾಡುತ್ತದೆ. ಉಪನಿಷತ್ತುಗಳನ್ನು ದೇಶಭಕ್ತಿ, ವಿದ್ಯಾಭ್ಯಾಸ, ಮತಾಭಿಮಾನ, ಕುತೂಹಲ - ಮುಂತಾದ ಕಾರಣಗಳಿಂದ ಓದಬಹುದಾದರೂ ಅವು ತತ್ತ್ವಜಿಜ್ಞಾಸೆಗೇ ಹೆಚ್ಚು ಒತ್ತು ಕೊಟ್ಟಿರುವದರಿಂದ ಜಿಜ್ಞಾಸಾದೃಷ್ಟಿಯಿಂದ ಓದುವವರಿಗೇ ಹೆಚ್ಚು ಉಪಯೋಗಕರವಾಗಿರುತ್ತವೆ.

ಈಚೆಗೆ ಕನ್ನಡಭಾಷೆಯಲ್ಲಿ ಉಪನಿಷತ್ತುಗಳನ್ನು ಕುರಿತ ಪ್ರೌಢ ವಿಚಾರಗ್ರಂಥಗಳೂ ಸಾಮಾನ್ಯಜನರಿಗೆ ಎಟುಕುವಂಥ ಸರಳಗ್ರಂಥಗಳೂ ಹೊರಬಂದಿವೆ. ಆದರೆ ದಶೋಪನಿಷತ್ತುಗಳ ಪ್ರಾಥಮಿಕಪರಿಚಯ, ಅವುಗಳಲ್ಲಿ ಅಡಗಿರುವ ಕಥೆ, ದೃಷ್ಟಾಂತಾದಿಗಳನ್ನು ವಿವರಿಸಿ ಸಿದ್ಧಗೊಳಿಸಿರುವ ಈ ಪುಸ್ತಕವು ವಿಶೇಷಾಧ್ಯಯನಕ್ಕೆ ಹೆಚ್ಚಿನ ಆಸಕ್ತಿಯನ್ನುಂಟುಮಾಡುತ್ತದೆ.

ತಿಪಟೂರಿನಲ್ಲಿರುವ ಶ್ರೀಮತಿ ನಾಗರತ್ನಮ್ಮ ವಿಶ್ವನಾಥಶ್ರೇಷ್ಠಿಯವರು ಈ ಗ್ರಂಥದ ಸಂಪೂರ್ಣ ಮುದ್ರಣವೆಚ್ಚವನ್ನು ವಹಿಸಿಕೊಂಡು ಧನಸಹಾಯವನ್ನು ಉದಾರವಾಗಿ ನೀಡಿರುತ್ತಾರೆ. ಇವರಿಗೂ ಇವರ ಕುಟುಂಬಬಂಧುವರ್ಗದವರಿಗೂ ಭಗವಂತನು ಉತ್ತರೋತ್ತರ ಪುರೋಭಿವೃದ್ಧಿಯನ್ನೂ ಜ್ಞಾನವೈರಾಗ್ಯಸಂಪತ್ತನ್ನೂ ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಇತಿ

**ಪ್ರಕಾಶಕರು**

ಹೊಳೆನರಸೀಪುರ,
ವಿಷು ಸಂವತ್ಸರ
ಆಷಾಢಬಹುಳ ತ್ರಯೋದಶಿ
ಬುಧವಾರ
**18-7-2001**

--------

{ಎಲ್ಲರೂ ಪ್ರಧಾನವೆಂದು ಒಪ್ಪಿರುವ}

**ಉಪನಿಷತ್ತುಗಳು**

| | | | |
|---|---|---|---|
| ೧. | ಈಶಾವಾಸ್ಯೋಪನಿಷತ್ತು | -- | ಶುಕ್ಲಯಜುರ್ವೇದದಲ್ಲಿದೆ. |
| ೨. | ಕೇನೋಪನಿಷತ್ತು | -- | ಸಾಮವೇದದ ತಲವಕಾರಶಾಖೆಯಲ್ಲಿದೆ. |
| ೩. | ಕಾಠಕೋಪನಿಷತ್ತು | -- | ಕೃಷ್ಣಯಜುರ್ವೇದದ ಕಠಶಾಖೆಯಲ್ಲಿದೆ. |
| ೪. | ಮುಂಡಕೋಪನಿಷತ್ತು | -- | ಅಥರ್ವವೇದದಲ್ಲಿದೆ. |
| ೫. | ಪ್ರಶ್ನೋಪನಿಷತ್ತು | -- | ಅಥರ್ವವೇದದಲ್ಲಿದೆ. |
| ೬. | ಮಾಂಡೂಕ್ಯೋಪನಿಷತ್ತು | -- | ಅಥರ್ವವೇದದಲ್ಲಿದೆ. |
| ೭. | ತೈತ್ತಿರೀಯೋಪನಿಷತ್ತು | -- | ಕೃಷ್ಣಯಜುರ್ವೇದದ ತೈತ್ತಿರೀಯ ಶಾಖೆಯಲ್ಲಿದೆ. |
| ೮. | ಐತರೇಯೋಪನಿಷತ್ತು | -- | ಋಗ್ವೇದದಲ್ಲಿದೆ. |
| ೯. | ಛಾಂದೋಗ್ಯೋಪನಿಷತ್ತು | -- | ಸಾಮವೇದದಲ್ಲಿದೆ. |
| ೧೦. | ಬೃಹದಾರಣ್ಯಕೋಪನಿಷತ್ತು | -- | ಶುಕ್ಲಯಜುರ್ವೇದದಲ್ಲಿದೆ. |

# ವಿಷಯಗಳ ಪರಿವಿಡಿ


ಪುಟ

I. ಮುನ್ನೋಟ ೧-೩

II. ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳು ೪-೨೭

೧. ಯೋಗ್ಯನಾದವನಿಗೆ ತತ್ತ್ವವನ್ನು ಹೇಳಬೇಕು ೪

೨. ವಿದ್ಯೆಯಲ್ಲಿ ಬಲವಾದ ಆಶೆಯಿರಬೇಕು ೫

೩. ನಿಜವಾದ ವಿದ್ಯೆ ೮

೪. ಪರಿಪೂರ್ಣವಿದ್ಯೆ ೧೦

೫. ಗುರುಕುಲವಾಸ ೧೧

೬. ಗುರುವಾಗುವದಕ್ಕೆ ಹವಣಿಸಬಾರದು ೧೪

೭. ತತ್ತ್ವವನ್ನು ಹುಡುಕುವದರಲ್ಲಿ ಯಾವಾಗಲೂ ಆಶೆಯಿರಬೇಕು ೧೫

೮. ಚರ್ಚೆಯಲ್ಲಿಯೂ ತಾಳ್ಮೆಯಿರಬೇಕು ೧೭

೯. ಧನಸಂಪತ್ತಿಗಿಂತಲೂ ವಿದ್ಯಾಸಂಪತ್ತು ಹೆಚ್ಚಿನದು ೧೯

೧೦. ಬ್ರಹ್ಮಜ್ಞಾನಿಯು ಎಂಥ ದುರವಸ್ಥೆಯಲ್ಲಿದ್ದರೂ ಪೂಜ್ಯನೇ ೨೧

೧೧. ಇಹಪರಸುಖಗಳಿಗಿಂತ ಬ್ರಹ್ಮಜ್ಞಾನವೇ ಹೆಚ್ಚಿನದು ೨೩

೧೨. ನಮ್ಮ ಶಕ್ತಿಯೆಲ್ಲವೂ ಪರಮಾತ್ಮನಿಂದ ಬಂದದ್ದು ೨೪

೧೩. ಪರತತ್ತ್ವವನ್ನು ತಿಳಿಯುವದಕ್ಕೆ ಏಕಾಗ್ರವಿಚಾರವು ಬೇಕು ೨೬

III. ಉಪನಿಷತ್ತುಗಳಲ್ಲಿ ಹೇಳಿರುವ ಸಿದ್ಧಾಂತ - ೨೮-೩೧

೧. ಬ್ರಹ್ಮದ ಹೆಸರುಗಳು ೨೮

೨. ಬ್ರಹ್ಮದ ಎರಡು ರೂಪಗಳು ೨೮

೩. ಪರಬ್ರಹ್ಮದ ಸ್ವರೂಪ ೨೯

೪. ಜೀವರುಗಳಿಗೂ ಪರಬ್ರಹ್ಮಕ್ಕೂ ಸಂಬಂಧವೇನು ? ೩೦

೫. ಪರಬ್ರಹ್ಮಕ್ಕೂ ಜಗತ್ತಿಗೂ ಸಂಬಂಧವೇನು ? ೩೧

IV. ಉಪನಿಷತ್ತುಗಳಲ್ಲಿ ಹೇಳಿರುವ ಕೆಲವು ಸಾಧನಗಳು - ೩೨-೩೬

೧. ಬ್ರಹ್ಮವನ್ನು ಹೇಗೆ ಉಪಾಸನೆಮಾಡಬೇಕು ? ೩೨

೨. ಬ್ರಹ್ಮಜ್ಞಾನಕ್ಕೆ ಬೇಕಾದ ಸಾಧನಗಳು ೩೪

V. ಉಪನಿಷತ್ತುಗಳಲ್ಲಿರುವ ದೃಷ್ಟಾಂತಗಳು - ೩೭-೫೨

೧. ಬೆಂಕಿ, ಉಸಿರು ೩೭
೨. ಆಲದ ಬೀಜ ೩೮
೩. ನೀರಿನಲ್ಲಿ ಕರಗಿದ ಉಪ್ಪು ೪೦
೪. ಗಂಧಾರದೇಶದವನು ೪೧
೫. ಎರಡು ಹಕ್ಕಿಗಳು ೪೨
೬. ಬಿಲ್ಲು, ಬಾಣ ೪೩
೭. ಗಾಡಿ, ಕುದುರೆ ೪೪
೮. ದೊಡ್ಡಮೀನು ೪೫
೯. ದಾರಕಟ್ಟಿದ ಹಕ್ಕಿ ೪೬
೧೦. ಜೇನುತುಪ್ಪ ೪೮
೧೧. ಶಬ್ದಗಳು, ಶಬ್ದಸಾಮಾನ್ಯ ೪೯
೧೨. ಉಪ್ಪಿನ ಹರಳು ೫೦
೧೩. ನದಿಗಳು, ಸಮುದ್ರ ೫೨

VI. ಉಪಸಂಹಾರ - ೫೩-೫೪

----------

॥ ಓಂ ॥

# ಉಪನಿಷತ್ತುಗಳ ಮೊದಲನೆಯ ಪರಿಚಯ

ঃঃঃঃঃঃঃঃঃ

## I ಮುನ್ನೋಟ

ಭರತಖಂಡದಲ್ಲಿ 'ಹಿಂದು' ಗಳೆಂದೆನಿಸಿಕೊಂಡಿರುವ ಜನರು ಧರ್ಮಗ್ರಂಥವೆಂದು ಎಣಿಸಿರುವವುಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದದ್ದು **ವೇದವು** . ವೇದವು ಪ್ರಪಂಚದ ಮತವಿಚಾರವನ್ನು ಇತಿಹಾಸದೃಷ್ಟಿಯಿಂದ ನೋಡಬೇಕೆನ್ನುವವರಿಗೆ ಸಿಕ್ಕುವ ಅತ್ಯಂತ ಪ್ರಾಚೀನಗ್ರಂಥವಾಗಿರುತ್ತದೆ. ವೇದದಲ್ಲಿ ಹಿಂದುಗಳಿಗೆ ಮಿಗಿಲಿಲ್ಲದ ಗೌರವವಿರುತ್ತದೆ. ಅವರು ವೇದವು ಒಂದು ಸಾಮಾನ್ಯಗ್ರಂಥವೆಂಬುದನ್ನೇ ಒಪ್ಪುವದಿಲ್ಲ ; ಅದು ಅನಾದಿಯಿಂದಲೂ ಹೀಗೆಯೇ ಇದ್ದುಕೊಂಡಿರುತ್ತದೆ ಎಂದೇ ಅವರು ಹೇಳುತ್ತಾರೆ. ವೇದವು **ಅಪೌರುಷೇಯ,** ಯಾವ ಒಬ್ಬ ಪುರುಷನೂ ರಚಿಸಿದ ಗ್ರಂಥವಲ್ಲ- ಎಂದು ಹಿಂದುಗಳು ಅನೇಕರು ಹೇಳುತ್ತಾರೆ. ಎಂಥ ವಿವೇಕಶಾಲಿಯಾದ ಪುರುಷನು, ಎಷ್ಟು ಒಳ್ಳೆಯ ಹೃದಯದಿಂದ, ರಚಿಸಿದ ಗ್ರಂಥದಲ್ಲಿಯೂ ಒಂದಿಷ್ಟಾದರೂ ದೋಷವು ಇದ್ದೇ ಇರುವದೆಂದು ಅವರ ಅಭಿಪ್ರಾಯವಿರುತ್ತದೆ. ಕೆಲವು ಜನ ಹಿಂದುಗಳು ಮಾತ್ರ 'ಸರ್ವಜ್ಞನೂ ಸರ್ವಶಕ್ತನೂ ಯಾವ ದೋಷವೂ ಇಲ್ಲದವನೂ ಆದ ಪರಮೇಶ್ವರನು ಮಾನವನ ಮೇಲಿನ ಕರುಣೆಯಿಂದ ವೇದಗಳನ್ನು ರಚಿಸಿ ಧರ್ಮ, ಅಧರ್ಮ - ಇವುಗಳ ಸ್ವರೂಪವನ್ನು ತಿಳಿಸಿಕೊಟ್ಟಿದ್ದಾನೆ' ಎಂದು ಒಪ್ಪಿರುತ್ತಾರೆ. ಈ ವೇದದ ಕೊನೆಯಲ್ಲಿರುವ **ಆರಣ್ಯಕ**ವೆಂಬ ಭಾಗದಲ್ಲಿಯೇ ಬಹುಮಟ್ಟಿಗೆ ಕಾಣಬರುವದರಿಂದ ಉಪನಿಷತ್ತುಗಳಿಗೆ **ವೇದಾಂತಗಳು** ಎಂಬ ಹೆಸರು ಬಂದಿರುತ್ತದೆ.

ವೇದದಲ್ಲಿ ನಾವು ಮಾಡಬೇಕಾದ ಕರ್ಮಗಳು, ಈಶ್ವರನ ಧ್ಯಾನ - ಇವುಗಳನ್ನು ತಿಳಿಸಿರುತ್ತದೆ. ಈಶ್ವರನ ಸ್ವರೂಪವು ಹೇಗಿರುವದು, ಆತನಿಗೂ ನಮಗೂ ಇರುವ ಸಂಬಂಧವು ಯಾವದು ? - ಎಂಬುದನ್ನೂ ಅದರಲ್ಲಿ ಹೇಳಿರುತ್ತದೆ. ಉಪನಿಷತ್ತುಗಳಲ್ಲಿ ಮುಖ್ಯವಾಗಿ ಈಶ್ವರನ ಸ್ವರೂಪದ ವಿವರವನ್ನೇ ಹೆಚ್ಚಾಗಿ ಕೊಟ್ಟಿರುತ್ತದೆಯಾದರೂ ಕರ್ಮಗಳು, ಧ್ಯಾನ - ಇವುಗಳಿಗೆ ಒಂದಕ್ಕೊಂದಕ್ಕೆ ಇರುವ ಸಂಬಂಧವನ್ನೂ ಇವರೆಡಕ್ಕೂ ಈಶ್ವರನನ್ನು ತಿಳಿಸುವ ಜ್ಞಾನಕ್ಕೂ ಇರುವ ಸಂಬಂಧವನ್ನೂ ವಿವರಿಸಿರುತ್ತದೆ. ಆದ್ದರಿಂದ ಹಿಂದೂಧರ್ಮಕ್ಕೆ ಇರುವ ಪ್ರಮಾಣಗ್ರಂಥಗಳಲ್ಲಿ ಬಹು ಮುಖ್ಯವಾದವು ಉಪನಿಷತ್ತುಗಳು. **ಉಪನಿಷತ್ತು** ಎಂಬ ಮಾತಿಗೆ ರಹಸ್ಯವೆಂದು ಅರ್ಥ. ಮಾನವನು ತಿಳಿದುಕೊಳ್ಳಲೇಬೇಕಾಗಿರುವ ರಹಸ್ಯವೆಂದರೆ ಪರಮೇಶ್ವರನು ಅಥವಾ ಪರಮಾತ್ಮನು. ಈ ರಹಸ್ಯವನ್ನು ಅರಿತುಕೊಂಡರೇ ಮನುಷ್ಯಜನ್ಮವು ಸಾರ್ಥಕವಾಗುತ್ತದೆ. ಆದ್ದರಿಂದ ಉಪನಿಷತ್ತುಗಳಿಗೆ ರಹಸ್ಯವೆಂಬ ಹೆಸರು ಬಂದಿರುವದು ಯುಕ್ತವಾಗಿರುತ್ತದೆ. ಈಗಿನ ಕಾಲಕ್ಕೆ ಉಪನಿಷತ್ತುಗಳನ್ನು ಓದಿ ಅರ್ಥವನ್ನು ವಿಚಾರಮಾಡುವವರು ಬಹಳ ಕಡಿಮೆಯಾಗಿರುತ್ತಾರೆ. ಉಪನಿಷತ್ತುಗಳು ಸಂಸ್ಕೃತಭಾಷೆಯಲ್ಲಿಯೇ ಇರುವದರಿಂದಲೂ ಸಂಸ್ಕೃತಭಾಷಾಜ್ಞಾನವು ಅನೇಕ ಕಾರಣಗಳಿಂದ ಜನರಲ್ಲಿ ಕಡಿಮೆಯಾಗುತ್ತಾ ಬಂದಿರುವದರಿಂದಲೂ ಉಪನಿಷತ್ತುಗಳಲ್ಲಿ ಏನಿದೆ ಯೆಂಬುದೇ ಒಂದು ರಹಸ್ಯವಾಗಿಬಿಟ್ಟಿರುತ್ತದೆ. ಆದ್ದರಿಂದ ಉಪನಿಷತ್ತುಗಳ ಮೊದಲನೆಯ ಪರಿಚಯಕ್ಕಾಗಿ ಹಂಬಲಿಸುವ ಜನರಿಗೋಸ್ಕರ ನಾವು ಈ ಪ್ರಯತ್ನವನ್ನು ಮಾಡಿರುತ್ತೇವೆ.

ಉಪನಿಷತ್ತಿನಲ್ಲಿ ಇರುವ ವಿಷಯವು ಒಂದೇ ಆದರೂ ಉಪನಿಷತ್ತುಗಳು ಹಲವು ಇವೆ. ವೇದಗಳು ನಾಲ್ಕು, ಒಂದೊಂದು ವೇದಕ್ಕೂ ಹಲವು ಶಾಖೆಗಳಿವೆ ; ಒಂದೊಂದು ಶಾಖೆಯಲ್ಲಿಯೂ ಕೆಲವು ಉಪನಿಷತ್ತುಗಳು ಇರುತ್ತವೆ. ಆದ್ದರಿಂದ ಉಪನಿಷತ್ತುಗಳ ಸಂಖ್ಯೆ ಇಷ್ಟೆಂದು ಹೇಳುವದು ಆಗುವ ಹಾಗಿಲ್ಲ. ಆದರೂ ಸದ್ಯಕ್ಕೆ ಉಪನಿಷತ್ತುಗಳೆಂಬ ಹೆಸರಿನಿಂದ ಈಗ ಪ್ರಸಿದ್ಧವಾಗಿರುವ ಗ್ರಂಥಭಾಗಗಳು ಸುಮಾರು ೧೦೮ ಇವೆ.

ಇವುಗಳಲ್ಲಿ ೫೦ ಉಪನಿಷತ್ತುಗಳನ್ನು ಮುಘಲಚಕ್ರವರ್ತಿಯಾಗಿ ಹಿಂದೂಸ್ಥಾನವನ್ನು ಆಳುತ್ತಿದ್ದ ಔರಂಗಜೇಬನ ಅಣ್ಣ **ದಾರಾಷುಕೋ** ಎಂಬಾತನು ಕ್ರಿ.ಶ. ೧೬೫೬ರಲ್ಲಿ **ಫಾರಸೀಭಾಷೆಗೆ** ತಿರುಗಿಸಿದ್ದನು. ಆ ಅನುವಾದದ ಆಧಾರದಿಂದ ಲ್ಯಾಟಿನ್ ಭಾಷೆಗೆ ಪಾಶ್ಚಾತ್ಯರು ಪರಿವರ್ತನೆಮಾಡಿಕೊಂಡರು. ಹೀಗಾಗಿ ಯೂರೋಪುದೇಶದಲ್ಲಿ ಉಪನಿಷತ್ತುಗಳ ವಿಚಾರವು ಹರಡಿಕೊಂಡಿತು. ಈಗ ಸಂಸ್ಕೃತದಿಂದಲೇ ಅವರು ಉಪನಿಷತ್ತುಗಳನ್ನು ಭಾಷಾಂತರಿಸಿಕೊಂಡಿರುತ್ತಾರೆ. ಉಪನಿಷತ್ತುಗಳು ಮೇಲೆ ಹೇಳಿದಂತೆ ಸಂಖ್ಯೆಯಲ್ಲಿ ಬಹಳವಾಗಿದ್ದರೂ ಇಲ್ಲಿ ನಾವು ಹೇಳುವ ವಿಷಯಗಳನ್ನು ಪ್ರಸಿದ್ಧವಾಗಿರುವ ಹತ್ತುಹನ್ನೆರಡು ಮುಖ್ಯಉಪನಿಷತ್ತುಗಳಿಂದ ಮಾತ್ರ ಆರಿಸಿಕೊಳ್ಳುವೆವು ; ಏಕೆಂದರೆ ಅವುಗಳು ಈಗ ಎಲ್ಲೆಲ್ಲಿಯೂ ಪ್ರಚಾರದಲ್ಲಿವೆ, ಅವುಗಳನ್ನು ಪ್ರಮಾಣವೆಂದು ಎಲ್ಲರೂ ಒಪ್ಪಿಕೊಂಡೂ ಇರುತ್ತಾರೆ.

ಉಪನಿಷತ್ತುಗಳಲ್ಲಿ ಆತ್ಮವಿಚಾರವನ್ನೂ ಕರ್ಮೋಪಾಸನೆಗಳ ತತ್ತ್ವವನ್ನೂ ಬಹುಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ಲಲಿತವಾದ ರೀತಿಯಲ್ಲಿ ಬರೆದಿರುತ್ತದೆ. ಉಪನಿಷತ್ತುಗಳಲ್ಲಿ ಕೆಲವು ಪದ್ಯರೂಪವಾಗಿರುತ್ತವೆ. ಪದ್ಯವಾಗಲಿ, ಗದ್ಯವಾಗಲಿ, ಎಲ್ಲೆಡೆಯಲ್ಲಿಯೂ ವಿಷಯವನ್ನು ಕಥೆಗಳಿಂದಲೂ, ಸಂಭಾಷಣೆಗಳಿಂದಲೂ ಸರಳವಾಗಿ ವಿವರಿಸಿರುತ್ತದೆ ; ಸಮಯಕ್ಕೆ ತಕ್ಕ ದೃಷ್ಟಾಂತಗಳು ಹೇರಳವಾಗಿ ಕಾಣಬರುತ್ತವೆ. ಆದ್ದರಿಂದ ಉಪನಿಷತ್ತುಗಳಲ್ಲಿರುವ ವಿಷಯವನ್ನು ತಿಳಿದುಕೊಳ್ಳಬೇಕೆಂಬ ಮನಸ್ಸಿದ್ದರೆ ಸಾಕು, ಹೆಂಗಸರು, ಗಂಡಸರು, ಹುಡುಗರು, ದೊಡ್ಡವರು - ಯಾರಾದರೂ ಬಹುಸುಲಭವಾಗಿ ತಿಳಿದುಕೊಳ್ಳಬಹುದಾಗಿರುತ್ತದೆ. ಈ ಚಿಕ್ಕ ಪುಸ್ತಕದಲ್ಲಿ ನಾವು ಕೆಲವು ಕಥಾಸಂದರ್ಭಗಳನ್ನು ಮೊದಲು ತಿಳಿಸುವೆವು. ಆಮೇಲೆ ಉಪನಿಷತ್ತಿನ ಬೋಧನೆಯನ್ನು ಸಂಗ್ರಹವಾಗಿ ಹೇಳಿ ಆ ಬಳಿಕ ಉಪನಿಷತ್ತಿನಲ್ಲಿರುವ ತತ್ತ್ವವನ್ನು ವಿವರಿಸುವ ಕೆಲವು ದೃಷ್ಟಾಂತಗಳನ್ನೂ ತಿಳಿಸುವೆವು.

------

# II ಉಪನಿಷತ್ತಿನಲ್ಲಿರುವ ಕಥಾಸಂದರ್ಭಗಳು

## ೧. ಯೋಗ್ಯನಾದವನಿಗೆ ತತ್ತ್ವವನ್ನು ಹೇಳಬೇಕು

(ಛಾಂದೋಗ್ಯ)

ಸತ್ಯಕಾಮನೆಂಬ ಹುಡುಗನು ಜಬಾಲೆಯ ಮಗನು. ಅವನಿಗೆ ಬ್ರಹ್ಮಚಾರಿಯಾಗಿ ವೇದಾಭ್ಯಾಸವನ್ನು ಮಾಡಬೇಕೆಂಬ ಆಶೆಯುಂಟಾಯಿತು. ತಾಯಿಯನ್ನು ''ಅಮ್ಮಾ, ವೇದಾಭ್ಯಾಸವನ್ನು ಮಾಡಬೇಕೆಂದಿದೇನೆ, ನಮ್ಮ ಗೋತ್ರವು ಯಾವದು ? ಹೇಳು'' ಎಂದು ಕೇಳಿದನು.

ಆಗಿನ ಕಾಲದಲ್ಲಿ ವಿದ್ಯಾರ್ಥಿಗಳು ವೇದವನ್ನು ಗುರುವಿನ ಬಳಿಯಲ್ಲಿದ್ದುಕೊಂಡು ಅಭ್ಯಾಸಮಾಡುತ್ತಿದ್ದರು. ಗುರುವು ತನ್ನ ಬಳಿಗೆ ಬಂದ ಶಿಷ್ಯನಿಗೆ **ಉಪನಯನ**ವೆಂಬ ಸಂಸ್ಕಾರವನ್ನು ಮಾಡಿದ ಬಳಿಕ ವೇದವನ್ನು ಹೇಳಿಕೊಡುತ್ತಿದ್ದನು. ಉಪನಯನವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಈ ಮೂರೂ ವರ್ಣದವರಿಗೂ ಮಾಡಿಸುತ್ತಿದ್ದರು. ಈ ಮೂರು ವರ್ಣದವರಿಗೂ ಇಂಥಿಂಥ ಋಷಿಯ ಗೋತ್ರದವರೆಂಬ ಸಂಜ್ಞೆ ಇದೆ ; ಆಯಾ ಋಷಿಯು ಆವರಿಗೆ ಬಹುಪುರಾತನಕಾಲದಲ್ಲಿ ಪೂರ್ವಜನಾಗಿದ್ದನೆಂಬುದು ಈ ಗೋತ್ರ ಸಂಜ್ಞೆಯ ಅರ್ಥ.

ಜಬಾಲೆಯು ''ಅಪ್ಪ, ನಿನ್ನ ಗೋತ್ರ ಯಾವದೋ ನನಗೆ ತಿಳಿಯದು. ನಾನು ಗಂಡನ ಮನೆಯಲ್ಲಿದ್ದುಕೊಂಡು ಅತಿಥಿಅಭ್ಯಾಗತರ ಪೂಜೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದೆನು ; ಇನ್ನೂ ನಾನು ಚಿಕ್ಕವಳಾಗಿದ್ದಾಗಲೇ ನೀನು ಹುಟ್ಟಿದೆ. ಅನಂತರ ಚಿಕ್ಕಂದಿನಲ್ಲಿಯೇ ನಿನ್ನ ತಂದೆಯು ತೀರಿಕೊಂಡದ್ದರಿಂದ ನನಗೆ ಗೋತ್ರದ ವಿಚಾರವೇನೂ ತಿಳಿಯಲೇ ಇಲ್ಲ. ನನ್ನ ಹೆಸರು ಜಬಾಲೆ, ನಿನ್ನ ಹೆಸರು ಸತ್ಯಕಾಮ. ಆದ್ದರಿಂದ ಗುರುಗಳು ಕೇಳಿದರೆ ಸತ್ಯಕಾಮಜಾಬಾಲ ನೆಂದೇ ನಿನ್ನ ಹೆಸರನ್ನು ಹೇಳು'' ಎಂದಳು.

ಹುಡುಗನು ಗೌತಮಗೋತ್ರದ ಹಾರಿದ್ರುಮತರೆಂಬ ಗುರುಗಳಲ್ಲಿಗೆ ಬಂದನು. ''ಪೂಜ್ಯರೆ, ತಮ್ಮಲ್ಲಿ ಬ್ರಹ್ಮಚಾರಿಯಾಗಿರಬೇಕೆಂಬ ಇಚ್ಛೆಯಿದೆ. ನನ್ನನ್ನು ಶಿಷ್ಯನಾಗಿ ಮಾಡಿಕೊಳ್ಳಬೇಕು''ಎಂದು ಕೇಳಿಕೊಂಡನು. ಪದ್ಧತಿಯಂತೆ

''ನಿನ್ನ ಗೋತ್ರವೇನಯ್ಯ ?'' ಎಂದು ಅವರು ಕೇಳಲು ''ಸ್ವಾಮಿ, ನನ್ನದು ಯಾವ ಗೋತ್ರವೆಂಬುದು ತಿಳಿಯದು. ತಾಯಿಯನ್ನು ಕೇಳಿದೆನು. ಆಕೆಯು 'ನಾನು ಚಿಕ್ಕಂದಿನಲ್ಲಿಯೇ ನಿನ್ನನ್ನು ಪಡೆದೆನು. ಆಗ ನಾನು ಮನೆಯ ಕೆಲಸದಲ್ಲಿಯೇ ಮುಳುಗಿದ್ದೆನಾದ್ದರಿಂದ ನಿನ್ನ ಗೋತ್ರವು ನನ್ನ ನೆನಪಿನಲ್ಲಿ ಉಳಿಯಲಿಲ್ಲ. ನಾನು ಜಬಾಲೆ, ನೀನು ಸತ್ಯಕಾಮ' ಎಂದಳು. ಆದ್ದರಿಂದ ನಾನು **ಸತ್ಯಕಾಮ ಜಾಬಾಲನು**'' ಎಂದು ಉತ್ತರವಿತ್ತನು.

ಆಗ ಕೂಡಲೆ ಗುರುಗಳು ''ಬ್ರಾಹ್ಮಣನಲ್ಲದವನು ಹೇಗೆ ಇಂಥ ಮಾತನ್ನಾಡಿಯಾನು ? ಸತ್ಯವನ್ನು ಬಿಡಲಿಲ್ಲವಲ್ಲ, ಇದೇ ನಿನ್ನ ಬ್ರಾಹ್ಮಣ್ಯಕ್ಕೆ ಗುರುತು. ಹೋಗು, ಸಮಿತ್ತನ್ನು ತೆಗೆದುಕೊಂಡು ಬಾ, ನಿನಗೆ ಸಂಸ್ಕಾರವನ್ನು ಮಾಡಿ ವೇದಾಧ್ಯಯನವನ್ನು ಮಾಡಿಸುವೆನು'' ಎಂದರು.

ಮುಂದೆ ಸತ್ಯಕಾಮನು ಬಹುಕಾಲದವರೆಗೆ ಗುರುಗಳ ಸೇವೆಯನ್ನು ಮಾಡಿಕೊಂಡಿದ್ದು ಅವರ ಅನುಗ್ರಹದಿಂದ ಹದಿನಾರು ಕಲೆಗಳ ಬ್ರಹ್ಮವಿದ್ಯೆಯನ್ನು ಕಲಿತುಕೊಂಡನು. ಮುಂದೆ ತಾನೂ ಒಬ್ಬ ದೊಡ್ಡ ಆಚಾರ್ಯನಾದನು.

ಯೋಗ್ಯತೆಯನ್ನು ನೋಡಿಯೇ ವಿದ್ಯೆಯನ್ನು ಹೇಳಬೇಕು, ಗುರುಗಳಿಂದ ಕ್ರಮವಾಗಿ ಕಲಿತ ವಿದ್ಯೆಯೇ ಹೆಚ್ಚು ಪ್ರಯೋಜನಕಾರಿಯಾಗುತ್ತದೆ- ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನವಾಯಿತು.

------

## ೨. ವಿದ್ಯೆಯಲ್ಲಿ ಬಲವಾದ ಆಶೆಯಿರಬೇಕು.

### (ಕಠ)

ವಾಜಶ್ರವಸನೆಂಬಾತನು ಸರ್ವಮೇಧವೆಂಬ ಒಂದು ದೊಡ್ಡ ಯಾಗವನ್ನು ಮಾಡಿದನು. ಆ ಯಾಗಕ್ಕೆ ತನ್ನಲ್ಲಿರುವದನ್ನೆಲ್ಲ ದಕ್ಷಿಣೆಯಾಗಿ ಕೊಡಬೇಕಾಗುತ್ತದೆ. ಅದರಂತೆ ಆತನು ಎಲ್ಲವನ್ನೂ ಕೊಟ್ಟುಬಿಟ್ಟನು.

ಅವನಿಗೆ **ನಚಿಕೇತ**ನೆಂಬ ಒಬ್ಬ ಮಗನಿದ್ದನು. ತಂದೆಯು ದಕ್ಷಿಣೆಯಾಗಿ ಕೊಟ್ಟಿದ್ದ ಹಸುಗಳು ಬಹಳ ಮುದಿಯಾಗಿದ್ದದ್ದನ್ನು ಆ ಹುಡುಗನು ನೋಡಿದನು. ನೀರು ಕುಡಿಯಲಾರವು, ಹುಲ್ಲುತಿನ್ನಲಾರವು, ಹಾಲಂತೂ ಕೊಡುವ ಸಂಭವವೇ ಇಲ್ಲ! ಇಂಥ ಹಸುಗಳನ್ನು ದಾನವಾಗಿ ಕೊಟ್ಟರೆ ದುರ್ಗತಿಯಲ್ಲದೆ ಒಳ್ಳೆಯಲೋಕವು ಸಿಕ್ಕೀತೆ ?- ಎಂದು ತನ್ನಲ್ಲಿತಾನು ಯೋಚಿಸಿಕೊಂಡನು. ಅವನು ತಂದೆಗೆ ಒಳ್ಳೆಯದಾಗಲೆಂಬ ಶ್ರದ್ಧೆಯಿಂದ ಕೂಡಲೆ ಆತನ ಬಳಿಗೆ ಬಂದು ''ಅಪ್ಪಾ, ನನ್ನನ್ನು ಯಾರಿಗೆ ಕೊಡುವೆ ?'' ಎಂದನು.

ಏನೋ ಹುಡುಗನ ಮಾತೆಂದು ತಂದೆಯು ಮೊದಮೊದಲು ಅವನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಇದ್ದನು. ಆದರೆ ನಚಿಕೇತನು ಮತ್ತೆ ಮತ್ತೆ ''ನನ್ನನ್ನು ಯಾರಿಗೆ ಕೊಡುವೆ, ನನ್ನನ್ನು ಯಾರಿಗೆ ಕೊಡುವೆ ?'' ಎಂದುಕೇಳುತ್ತಲೇಬರುತ್ತಲೂ ತಂದೆಯು ಕೋಪದಿಂದಲೋ ಏನೋ, ''ಎಲಾ, ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ !'' ಎಂದುಬಿಟ್ಟನು. ಆದರೆ ''ಅಯ್ಯೊ, ನಾನು ಎಂಥ ಮಾತನಾಡಿಬಿಟ್ಟೆನು !'' ಎಂದು ಕೂಡಲೆ ಪಶ್ಚಾತ್ತಾಪವನ್ನು ಹೊಂದಿ ತನ್ನಲ್ಲಿತಾನು ಪೇಚಾಡುತ್ತಿದ್ದನು. ಯಾಗದೀಕ್ಷೆಯಲ್ಲಿ ಕೊಡುತ್ತೇನೆಂದು ಹೇಳಿದ್ದನ್ನು ಕೊಡದೆ ಇರಕೂಡದು. ಅಲ್ಲಿ ಸ್ವಲ್ಪವೂ ಯಾವ ಕಾರಣದಿಂದಲೂ ಸುಳ್ಳನ್ನು ಹೇಳಬಾರದು.

**ನಚಿಕೇತ**ನು ತಂದೆಯ ಮನಸ್ಸಿನ ಕಳವಳವನ್ನು ಕಂಡು ಇಂತೆಂದನು: ''ಅಪ್ಪ, ನಮ್ಮ ಹಿಂದಿನವರು ಹೇಗೆ ನಡೆದುಕೊಂಡರು, ಈಗಿನ ದೊಡ್ಡವರು ಹೇಗೆ ನಡೆದುಕೊಳ್ಳುತ್ತಿದಾರೆ, ನೋಡು. ಯಾರಾದರೂ ಸುಳ್ಳನ್ನಾಡಿದಾರೆಯೆ ? ಹುಲ್ಲು ಒಣಗಿ ಹುಲ್ಲು ಹುಟ್ಟುವಂತೆ ಮನುಷ್ಯನು ಮತ್ತೆ ಮತ್ತೆ ಹುಟ್ಟಿಸಾಯುತ್ತಿರುವನು. ಇದಕ್ಕಾಗಿ ಏತಕ್ಕೆ ಅಸತ್ಯವನ್ನು ಹೇಳಬೇಕು ? ನನ್ನನ್ನು ಯಮನ ಬಳಿಗೆ ಕಳುಹಿಸಿಕೊಡು.'' ಹೀಗೆ ತಂದೆಯನ್ನು ಸಮಾಧಾನಗೊಳಿಸಿ ಬಾಲಕನು ಯಮನಲ್ಲಿಗೆ ನಡೆದೇ ಬಿಟ್ಟನು !

ಆಗ ಯಮನು ಮನೆಯಲ್ಲಿರಲಿಲ್ಲ. ನಚಿಕೇತನು ಮೂರುದಿನಗಳು ಕಾದಿರಬೇಕಾಯಿತು. ಯಮನು ಮನೆಗೆ ಬಂದು ಅತಿಥಿಯಾದ ಬಾಲಕನನ್ನು ತಾನು ಮೂರು ದಿನಗಳು ಉಪವಾಸವಿರಿಸಬೇಕಾಯಿತಲ್ಲ!- ಎಂದುಕೊಂಡು ''ಅಪ್ಪಾ, ನಾನು ಅಪರಾಧಿಯಾಗಿರುತ್ತೇನೆ, ಇದಕ್ಕೆ ಪರಿಹಾರವಾಗಿ ನೀನು ಉಪವಾಸವಿದ್ದ ಮೂರು ದಿನಗಳಿಗೂ ದಿನಕ್ಕೊಂದರಂತೆ ಮೂರು ವರಗಳನ್ನು ಕೇಳಿಕೊ, ಕೊಡುತ್ತೇನೆ'' ಎಂದನು.

ನಚಿಕೇತನು ''ತಂದೆಯವರಿಗೆ ಮನಃಶಾಂತಿಯನ್ನು ಕೊಡು, ಅವರು ನನ್ನಮೇಲೆ ಕೋಪವನ್ನು ಮಾಡದೆ ಒಳ್ಳೆಯ ಮನಸ್ಸಿನವರಾಗಿ ನನ್ನನ್ನು ಮಾತನಾಡಿಸಬೇಕು''ಎಂದು ಒಂದು ವರವನ್ನು ಬೇಡಿಕೊಂಡನು. ಆಮೇಲೆ ಕರ್ಮದಿಂದಲೂ ಧ್ಯಾನದಿಂದಲೂ ಬ್ರಹ್ಮಲೋಕವನ್ನು ಪಡೆಯುವ ರೀತಿಯನ್ನು ತಿಳಿಯಿಸಬೇಕೆಂದು ಎರಡನೆಯ ವರವನ್ನು ಕೇಳಿಕೊಂಡನು. ಯಮನು ಆ ಎರಡು ವರಗಳನ್ನೂ ಕೊಟ್ಟಬಳಿಕ ನಚಿಕೇತನು ''ಹುಟ್ಟುಸಾವುಗಳಿಲ್ಲದ, ಪುಣ್ಯಪಾಪಗಳಿಲ್ಲದ ಪರಮಾತ್ಮನ ಸ್ವರೂಪವನ್ನು ನನಗೆ ತಿಳಿಯ ಹೇಳು'' ಎಂದು ಕೇಳಿಕೊಂಡನು.

ಯಮನು ''ಅಯ್ಯೊ, ಈ ವಿದ್ಯೆಯೇಕೆ ? ಇದನ್ನು ತಿಳಿಯುವದು ದೇವತೆ ಗಳಿಗೂ ಕಷ್ಟವಾಗಿರುತ್ತದೆ ; ತಿಳಿದುಕೊಂಡಮೇಲೆ ಅದರಿಂದ ಆಗಬೇಕಾದ ದ್ದಾದರೂ ಏನು ? ಈ ವಿದ್ಯೆಗಿಂತಲೂ ನಿನಗೆ ಬೇಕಾದ ಬೇರೆ ಇಷ್ಟಾರ್ಥ ಗಳನ್ನು ಕೇಳಿಕೊಳ್ಳಬಾರದೆ ? ನೂರುವರ್ಷ ಬದುಕಿರುವ ಪೂರ್ಣಾಯುಸ್ಸನ್ನು ಬೇಕಾದರೆ ಕೇಳಿಕೊ ; ಮಕ್ಕಳು, ಮೊಮ್ಮಕ್ಕಳು, ದನಕರು, ಹಣಕಾಸು, ಆನೆಕುದುರೆಗಳು, ರಥಗಳು, ದಾಸದಾಸಿಯರು, ಭೂಮಂಡಲದ ಸಾಮ್ರಾಜ್ಯ- ಇವುಗಳು ಬೇಕಾದರೂ ಕೇಳಿಕೊ''ಎಂದರೂ ಹುಡುಗನು ಅವುಯಾವವಕ್ಕೂ ಮನಸೋಲಲಿಲ್ಲ. ''ಮೃತ್ಯುದೇವನೆ, ಈ ಭೋಗಗಳೆಲ್ಲ ಏನುಸುಖವನ್ನು ಕೊಟ್ಟಾವು ? ಅವು ಇಂದ್ರಿಯಗಳನ್ನು ಸೊರಗಿಸುವವು, ಅಷ್ಟೆ. ನಾವು ಎಷ್ಟುಕಾಲ ಬದುಕಿದರೆ ತಾನೆ ಸಾಕೆನಿಸೀತು ? ಹಣದಿಂದ ಮನುಷ್ಯನಿಗೆ ತೃಪ್ತಿಯಾದೀತೆ ? ಇದಿರಲಿ. ನಿನ್ನ ದರ್ಶನದಿಂದಲೇ ನಮಗೆ ಸಿಕ್ಕುವ ಹಣವು

ಸಿಕ್ಕಿಯೇತೀರುತ್ತದೆ, ಬಾಳಬೇಕಾದಷ್ಟು ಕಾಲದ ಆಯುಸ್ಸೂ ದೊರೆಯುತ್ತದೆ. ಕುದುರೆಗಳು, ರಥಗಳು, ಹಾಡು, ಕುಣಿತ ಇವೆಲ್ಲ ನಿನ್ನಲ್ಲಿಯೇ ಇರಲಿ. ನನಗೆ ಬೇಕಾದದ್ದು ಪರಮಾತ್ಮನ ವಿದ್ಯೆಯೊಂದೇ, ಅದನ್ನೇ ನನಗೆ ತಿಳಿಸಿಕೊಡು'' ಎಂದು ಕೇಳಿದನು.

ಯಮನಿಗೆ ಪರಮಸಂತೋಷವಾಯಿತು. ''ನಚಿಕೇತ, ನೀನು ಧೀರನು. ಬರಿಯ ಭೋಗಕ್ಕೆ ಹಾತುವರಿಯುವ ಮೂಢರು ಬೇಕಾದಷ್ಟು ಜನರಿರುತ್ತಾರೆ. ನಿಜವನ್ನೇ ಅರಿಯಬೇಕೆಂದು ಮಿಕ್ಕ ಕಾಮುಗಳನ್ನೆಲ್ಲ ಒತ್ತಲಿಸಿದೆಯಲ್ಲ ! ನೀನೇ ಧೀರನು !'' ಎಂದು ಅವನನ್ನು ಕೊಂಡಾಡಿ ಅವನಿಗೆ ಪರಮಾತ್ಮಸ್ವರೂಪವನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟನು.

------

# ೩. ನಿಜವಾದ ವಿದ್ಯೆ

## (ಛಾಂದೋಗ್ಯ)

ಒಂದಾನೊಂದು ಕಾಲಕ್ಕೆ ನಾರದರು ಸನತ್ಕುಮಾರರಲ್ಲಿಗೆ ಬಂದು ''ಪೂಜ್ಯರೆ, ನನಗೆ ತತ್ತ್ವವನ್ನು ಹೇಳಿಕೊಡಬೇಕು'' ಎಂದು ಬೇಡಿಕೊಂಡರು. ಸನತ್ಕುಮಾರರು ತತ್ತ್ವವನ್ನು ಚೆನ್ನಾಗಿ ಅರಿತು ಅದರಲ್ಲಿಯೇ ನೆಲೆನಿಂತವರು. ಅವರು ''ಅಯ್ಯ, ನಿನಗೆ ಏನೇನು ಬರುತ್ತದೆಯೋ ಅದನ್ನು ಮೊದಲು ನನಗೆ ತಿಳಿಯಪಡಿಸು, ಆಮೇಲೆ ಅಲ್ಲಿಂದ ಮುಂದಕ್ಕೆ ಹೇಳಿಕೊಡುತ್ತೇನೆ'' ಎಂದರು.

ಆಗ ನಾರದರು ಹೇಳಿದ್ದು : ''ಪೂಜ್ಯರೆ, ಋಗ್ವೇದವನ್ನು ಬಲ್ಲೆನು, ಯಜುರ್ವೇದವನ್ನು ಬಲ್ಲೆನು, ಸಾಮವೇದವನ್ನೂ ನಾಲ್ಕನೆಯದಾದ ಅಥರ್ವವೇದವನ್ನೂ ಬಲ್ಲೆನು, ಐದನೆಯದಾಗಿ ಇತಿಹಾಸಪುರಾಣಗಳನ್ನು ತಿಳಿದುಕೊಂಡಿದ್ದೇನೆ. ವೇದಗಳಿಗೆಲ್ಲ ವೇದವಾದ ವ್ಯಾಕರಣವನ್ನು ಬಲ್ಲವನಾಗಿರುತ್ತೇನೆ. ಪಿತೃಗಳಿಗೆ ಮಾಡುವ ಶ್ರಾದ್ಧದ ಕಲ್ಪವನ್ನೂ ಅರಿತಿದ್ದೇನೆ.

ಗಣಿತವನ್ನು ಅಭ್ಯಾಸಮಾಡಿರುತ್ತೇನೆ ; ಶಕುನಗಳ ತಿಳಿವಳಿಕೆಯೂ ನನಗೆ ಇರುತ್ತದೆ ; ನಿಕ್ಷೇಪಗಳನ್ನು ಕಂಡುಹಿಡಿಯುವ ಶಾಸ್ತ್ರವನ್ನೂ ತಿಳಿದಿರುತ್ತೇನೆ. ತರ್ಕಶಾಸ್ತ್ರವನ್ನು ಬಲ್ಲವನಾಗಿರುತ್ತೇನೆ, ನೀತಿಶಾಸ್ತ್ರವನ್ನು ಬಲ್ಲವನಾಗಿರುತ್ತೇನೆ ; ದೇವತೆಗಳ ಸ್ವರೂಪವನ್ನು ವಿವರಿಸುವ ನಿರುಕ್ತವನ್ನೂ ಅಭ್ಯಾಸ ಮಾಡಿರುತ್ತೇನೆ. ಬ್ರಹ್ಮವೆಂಬ ವೇದಕ್ಕೆ ಬೇಕಾದ ಶಿಕ್ಷೆ, ಕಲ್ಪ, ಛಂದಸ್ಸು-ಇವುಗಳನ್ನೂ ಬಲ್ಲೆನು. ಭೂತವಿದ್ಯೆಯನ್ನು ಅರಿತಿರುತ್ತೇನೆ ; ಕ್ಷತ್ರಿಯರಿಗೆ ಬೇಕಾದ ಧನುರ್ವೇದವು ತಿಳಿದಿರುತ್ತದೆ ; ಜ್ಯೋತಿಷ್ಕರ ನಕ್ಷತ್ರವಿದ್ಯೆಯೂ ತಿಳಿದಿರುತ್ತದೆ. ಸರ್ಪಗಳ ವಿಷವನ್ನು ಪರಿಹರಿಸುವ ವಿದ್ಯೆ, ಗಂಧರ್ವರ ನೃತ್ಯಗೀತವಾದ್ಯವೇ ಮುಂತಾದವುಗಳು, ಶಿಲ್ಪವಿದ್ಯೆ - ಇವನ್ನೂ ತಿಳಿದಿರುತ್ತೇನೆ. ಪೂಜ್ಯರೆ, ಇದೆಲ್ಲವನ್ನೂ ತಿಳಿದುಕೊಂಡಿರುತ್ತೇನೆ'' ಎಂದರು.

ನಾರದರು ಹಿಂದಿನ ಕಾಲದಲ್ಲಿ ತಿಳಿದಿರಬೇಕಾದ ವೈದಿಕವಿದ್ಯೆಯನ್ನೂ ಲೌಕಿಕವಿದ್ಯೆಯನ್ನೂ ಬಲ್ಲವರಾಗಿದ್ದರು. ಈಗಿನ ಕಾಲದ ಭಾಷೆಯಲ್ಲಿ ಹೇಳಿದರೆ ಮನುಷ್ಯನ ಜೀವಿತಕ್ಕೆ ಸಂಬಂಧಪಟ್ಟ ವಿದ್ಯೆಗಳೆಲ್ಲವೂ ಅವರಿಗೆ ಬರುತ್ತಿತ್ತು ಎಂದು ಹೇಳಬಹುದಾಗಿದೆ. ಆದರೆ ತಿಳಿಯದೆ ಇದ್ದ ಒಂದು ವಿದ್ಯೆಯಿತ್ತು. ಅವರು ಅದಕ್ಕಾಗಿ ಸನತ್ಕುಮಾರರಲ್ಲಿಗೆ ಬಂದಿದ್ದರು.

''ಸ್ವಾಮಿ, ನಾನು ಇಷ್ಟನ್ನು ತಿಳಿದುಕೊಂಡಿದ್ದರೂ ಬರಿಯ ಮಂತ್ರ ಜ್ಞಾನಿಯಾಗಿರುತ್ತೇನೆ. ಆತ್ಮವಿದ್ಯೆಯನ್ನು ಅರಿತಿಲ್ಲ. ಆತ್ಮಜ್ಞಾನಿಯಾದರೆ ಶೋಕವಿಲ್ಲದವನಾಗುವನೆಂದು ಪೂಜ್ಯರಾದ ತಮ್ಮಂಥವರಿಂದ ಕೇಳಿರುತ್ತೇನೆ. ನಾನಾದರೊ, ಶೋಕದಲ್ಲಿ ಮುಳುಗಿರುತ್ತೇನೆ. ಪೂಜ್ಯರೆ, ತಾವು ನನ್ನನ್ನು ಈ ಶೋಕದ ಆಚೆಯ ದಂಡೆಯನ್ನು ಸೇರಿಸಬೇಕು !'' ಎಂದು ನಾರದರು ಬೇಡಿಕೊಂಡರು.

ನಾವು ಈಗಿನ ಕಾಲಕ್ಕೆ ನಾರದರಿಗಿಂತ ಇನ್ನೂ ಹೆಚ್ಚಿನ ವಿಜ್ಞಾನಗಳನ್ನು ಕಲಿತಿರಬಹುದು. ನಮ್ಮ ಕಾಲಕ್ಕೆ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಎಂಬ ಪಂಚಭೂತಗಳ ವಿಚಾರವೂ ಹೆಚ್ಚುಹೆಚ್ಚಾಗಿ ತಿಳಿದಿರುತ್ತದೆ. ನಮ್ಮ ವಿಜ್ಞಾನದ ವಿಶ್ವಕೋಶವು ಬಲುದೊಡ್ಡದಾಗಿರುತ್ತದೆ. ಆದರೇನು ? ನಾವು

ಶೋಕವನ್ನು ದಾಟುವ ವಿದ್ಯೆಯನ್ನು ಕಲಿತಿರುವದಿಲ್ಲ. ಎಷ್ಟು ವಿಜ್ಞಾನವನ್ನು ಹೆಚ್ಚಿಸಿಕೊಂಡರೂ ಶೋಕವನ್ನು ತಪ್ಪಿಸುವದಕ್ಕೆ ಆಗಿರುವದಿಲ್ಲ. ನಮ್ಮ ವಿದ್ಯೆಯು ಭೋಗವನ್ನು ಹೆಚ್ಚಿಸಬಹುದು. ಆದರೆ ಶೋಕವನ್ನು ಗೆಲ್ಲುವದಕ್ಕೆ **ಪರಮಾತ್ಮವಿದ್ಯೆಯೇ** ಬೇಕು. ಅದೇ ನಿಜವಾದ ವಿದ್ಯೆ.

------

## ೪. ಪರಿಪೂರ್ಣವಿದ್ಯೆ

(ಛಾಂದೋಗ್ಯ)

ಅರುಣನ ಮಕ್ಕಳಾದ ಉದ್ದಾಲಕರೆಂಬುವರಿಗೆ **ಶ್ವೇತಕೇತು**ವೆಂಬ ಮಗನಿದ್ದನು. ಮಗನಿಗೆ ಉಪನಯನದ ಕಾಲವು ಮೀರುತ್ತಾಬಂದದ್ದರಿಂದ ಅವರು ''ಮಗೂ, ನೀನು ಒಬ್ಬ ಗುರುಗಳಲ್ಲಿ ಬ್ರಹ್ಮಚಾರಿಯಾಗಿದ್ದುಕೊಂಡು ವಿದ್ಯಾಭ್ಯಾಸವನ್ನು ಮಾಡಬೇಕು. ನಮ್ಮ ಕುಲದವರು ಯಾರೂ ಓದದೆ ಬರಿಯ ಹುಟ್ಟುಬ್ರಾಹ್ಮಣರೆನಿಸಿಕೊಂಡಿರುವದಿಲ್ಲ'' ಎಂದರು. ತಂದೆಯು ತಿಳಿವಳಿಕೆಯುಳ್ಳವರಾಗಿದ್ದರೂ ಮತ್ತೊಬ್ಬ ಗುರುಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕೆಂದು ಹೇಳಿರುವದನ್ನು ನೋಡಿದರೆ ತಾವು ಎಲ್ಲಿಗೋ ಪರಸ್ಥಳಕ್ಕೆ ಹೋಗಿಬರಬೇಕಾದ ಸಂದರ್ಭವೊದಗಿತ್ತೆಂದು ಕಾಣುತ್ತದೆ. ಹಿಂದಿನ ಕಾಲದಲ್ಲಿ ಬಹುಮಟ್ಟಿಗೆ ತಂದೆಯೇ ಮಗನಿಗೆ ಗುರುವಾಗಿರುತ್ತಿದ್ದನು.

ಆಗ ಹುಡುಗನಿಗೆ ಹನ್ನೆರಡನೆಯ ವರ್ಷ. ಬ್ರಾಹ್ಮಣರು ಹದಿನಾರನೆಯ ವರ್ಷದೊಳಗೆ ಮಕ್ಕಳಿಗೆ ಉಪನಯನವನ್ನು ಮಾಡಿಸದೆ ಇದ್ದರೆ ಮಹಾದೋಷವುಂಟಾಗುವದೆಂದು ಶಾಸ್ತ್ರದಲ್ಲಿದೆ. ಹುಡುಗನು ತಂದೆಯ ಅಪ್ಪಣೆಯಂತೆ ಗುರುಗಳಲ್ಲಿ ಹೋಗಿ ತನ್ನ ಇಪ್ಪತ್ತುನಾಲ್ಕನೆಯ ವರ್ಷದವರೆಗೂ ವಿದ್ಯಾಭ್ಯಾಸವನ್ನು ಮಾಡಿಕೊಂಡು ಮನೆಗೆ ಬಂದನು. ಅವನು ತಾನು ವೇದಗಳನ್ನೂ ವೇದಾಂಗಗಳನ್ನೂ ಎಲ್ಲವನ್ನೂ ಓದಿರುತ್ತೇನೆಂಬ ಗರ್ವದಿಂದ ಸೆಟೆದುಕೊಂಡು ಬಂದಿದ್ದನು.

''ಶ್ವೇತಕೇತುವೆ, ನೀನು ಬಹಳವಾಗಿ ಓದುಕಲಿತಿರುವೆನೆಂದು ಭಾವಿಸಿರುವಂತೆ ಕಾಣಿಸುತ್ತಿದೆ. ಯಾವದರಿಂದ ಕೇಳದೆ ಇದ್ದದ್ದನ್ನೂ ಕೇಳಿದಂತಾಗುವದೋ, ವಿಚಾರಮಾಡದೆ ಇರುವದನ್ನೂ ವಿಚಾರಿಸಿದಂತೆ ಆಗುವದೋ, ಅರಿತುಕೊಳ್ಳದಿರುವದನ್ನೂ ಅರಿತುಕೊಂಡಂತೆ ಆಗುವದೋ ಆ ವಸ್ತುವನ್ನು ನೀನು ಕೇಳಿ ತಿಳಿದುಕೊಂಡಿರುವೆಯೇನು ?' ಎಂದು ಉದ್ದಾಲಕರು ಕೇಳಿದರು.

ಶ್ವೇತಕೇತುವು ಅದನ್ನು ಕೇಳಿ ತಿಳಿದುಕೊಂಡಿರಲಿಲ್ಲ. ಅವನು ಎಷ್ಟೋ ಓದುಗಳನ್ನು ಓದಿ ತಿಳಿದುಕೊಂಡಿದ್ದನು. ಆದರೂ ಅವನು ಒಂದನ್ನು ತಿಳಿದುಕೊಂಡರೆ ಮಿಕ್ಕದ್ದೆಲ್ಲವನ್ನೂ ತಿಳಿದುಕೊಂಡಂತೆ ಆಗುವ ಪರಿಪೂರ್ಣ ವಿದ್ಯೆಯನ್ನು ಸಂಪಾದಿಸಿಕೊಂಡಿರಲಿಲ್ಲ. ಅವನು ವಿನಯದಿಂದ ''ಪೂಜ್ಯರೆ, ಆ ಅದ್ಭುತವಾದ ವಿದ್ಯೆ ಯಾವದು ? ಒಂದನ್ನು ತಿಳಿದುಕೊಂಡರೆ ಮತ್ತೆಲ್ಲವನ್ನೂ ತಿಳಿದುಕೊಂಡಂತೆ ಆಗುವದೆಂಬುದು ಹೇಗೆ ?'' ಎಂದನು.

ಬಳಿಕ ತಂದೆಯು ಪರಮಾತ್ಮವಿದ್ಯೆಯನ್ನು ಅವನಿಗೆ ಉಪದೇಶಿಸಿದರು.

------

## ೫. ಗುರುಕುಲವಾಸ

### (ಛಾಂದೋಗ್ಯ)

ಒಂದಾನೊಂದು ಕಾಲದಲ್ಲಿ ಪ್ರಜಾಪತಿಬ್ರಹ್ಮನು ಇಂತೆಂದನು : 'ಆತ್ಮನಲ್ಲಿ ಯಾವ ದೋಷಗಳೂ ಇಲ್ಲ, ಅವನಿಗೆ ಮುಪ್ಪಿಲ್ಲ ; ಸಾವಿಲ್ಲ ; ಶೋಕವಿಲ್ಲ ; ಹಸಿವಿಲ್ಲ, ನೀರಡಿಕೆಯಿಲ್ಲ, ಅವನು ಸತ್ಯಕಾಮನು, ಅವನು ಬಯಸಿದ್ದೆಲ್ಲ ಆಗುವದು ; ಸತ್ಯಸಂಕಲ್ಪನು, ಮನಸ್ಸಿನಲ್ಲಿ ನೆನೆಸಿಕೊಂಡದ್ದೆಲ್ಲ ನೆರವೇರುವದು. ಅವನನ್ನೇ ಹುಡುಕಬೇಕು, ಅವನನ್ನೇ ಅರಿತುಕೊಳ್ಳಬೇಕು. ಅವನನ್ನು ಹುಡುಕಿ ಅರಿತುಕೊಂಡರೆ ಸಕಲಲೋಕಗಳೂ ಇಷ್ಟಫಲಗಳೂ ಒದಗುವವು.'

ಹೀಗೆ ಪ್ರಜಾಪತಿಯು ಅಂದದ್ದು ದೇವತೆಗಳಿಗೂ ಅಸುರರಿಗೂ ತಿಳಿಯಿತು. 'ಸರಿ, ಹಾಗಾದರೆ ಈ ಆತ್ಮನನ್ನು ಹುಡುಕಿ ತಿಳಿದುಕೊಳ್ಳೋಣ. ಸರ್ವಲೋಕಗಳನ್ನೂ ಸರ್ವಕಾಮುಗಳನ್ನೂ ಪಡೆದುಕೊಳ್ಳೋಣ' ಎಂದುಕೊಂಡು ಹೊರಟರು. ದೇವತೆಗಳಲ್ಲಿ ಇಂದ್ರನೂ ಅಸುರರಲ್ಲಿ ವಿರೋಚನನೂ ಒಬ್ಬರಮೇಲೊಬ್ಬರು ಹುರುಡಿನಿಂದ ಗುರುವಾದ ಪ್ರಜಾಪತಿಯ ಬಳಿಗೆ ಪದ್ಧತಿಯ ಪ್ರಕಾರ ಸಮಿತ್ತನ್ನು ಕೈಯಲ್ಲಿ ಹಿಡಿದುಕೊಂಡು ವಿನಯದಿಂದ ಬಂದರು.

ಆಮೇಲೆ ಅವರಿಬ್ಬರೂ ಮೂವತ್ತೆರಡು ವರ್ಷಗಳಕಾಲ ಪ್ರಜಾಪತಿಯಲ್ಲಿ ಬ್ರಹ್ಮಚರ್ಯದಿಂದ ಇದ್ದುಕೊಂಡಿದ್ದರು. ಅವರ ಸೇವೆಯಿಂದ ಸಂತುಷ್ಟನಾದ ಗುರುವು 'ಏತಕ್ಕಾಗಿ ಇಲ್ಲಿಗೆ ಬಂದಿರುತ್ತೀರಿ ?' ಎಂದು ಕೇಳಲು ಅವರು 'ಸ್ವಾಮಿ, ಮುಪ್ಪು, ಸಾವು, ಶೋಕ, ಹಸಿವು, ಬಾಯಾರಿಕೆ - ಯಾವದೂ ಇಲ್ಲದ ಆತ್ಮನನ್ನು ಹುಡುಕಿ ಅರಿತುಕೊಂಡರೆ ಸಕಲ ಲೋಕಗಳೂ ಸಕಲಕಾಮುಗಳೂ ಸಿಕ್ಕುವವೆಂದು ತಾವು ಹೇಳಿರುವಿರಂತಲ್ಲ ! ಆ ಆತ್ಮನನ್ನು ನಮಗೆ ತಿಳಿಸಿಕೊಡಬೇಕು' ಎಂದರು.

ಆಗ ಪ್ರಜಾಪತಿಯು 'ಇಗೊ, ಕಣ್ಣಿನಲ್ಲಿ ಕಾಣುವ ಪುರುಷನೇ ಆತ್ಮನು, ಇದೇ ಸಾವಿಲ್ಲದ ಭಯವಿಲ್ಲದ ಬ್ರಹ್ಮವು' ಎಂದು ನುಡಿದನು. 'ನೀರಿನಲ್ಲಿ ಕಾಣುವದಲ್ಲ, ಕನ್ನಡಿಯಲ್ಲಿಯೂ ಕಾಣುವದಲ್ಲ - ಇವುಗಳಲ್ಲಿ ಯಾವದು ಆತ್ಮನು ?'' ಎಂದು ಅವರು ಕೇಳಿದರು. ಗುರುವು 'ಅವನು ಎಲ್ಲಾ ಸ್ಥಳಗಳಲ್ಲಿಯೂ ಕಾಣಿಸುತ್ತಾನೆ, ನೀರಿನ ತಟ್ಟೆಯಲ್ಲಿ ನೋಡಿ, ಆಗ ನಿಮಗೆ ಯಾವದು ತಿಳಿಯುವದಿಲ್ಲವೋ ಅದನ್ನು ಕೇಳಿರಿ'' ಎಂದನು. ಅವರು ಅದರಂತೆ ಮಾಡಿದ ಬಳಿಕ 'ಏನು ಕಂಡಿರಿ ?' ಎಂದು ಕೇಳಿದನು. ಆಗ ಅವರು ''ಸ್ವಾಮಿ, ಕೂದಲು ಉಗುರುಗಳವರೆಗೆ ಎಲ್ಲವನ್ನೂ ಕಂಡೆವು'' ಎಂದರು. 'ಈಗ ಕ್ಷೌರವನ್ನು ಮಾಡಿಸಿಕೊಂಡು ಒಳ್ಳೆಯ ಉಡುಪನ್ನು ಹಾಕಿಕೊಂಡು ಚೆನ್ನಾಗಿ ಅಲಂಕರಿಸಿಕೊಂಡು ಮತ್ತೊಂದು ಸಲ ನೀರಿನ ತಟ್ಟೆಯಲ್ಲಿ ನೋಡಿರಿ!' ಎಂದನು. ಅವರು ಅದರಂತೆ ಮಾಡಿದರು. 'ಈಗ ಏನು ಕಂಡಿರಿ ?' ಎಂದು ಪ್ರಜಾಪತಿಯು ಕೇಳಲು 'ನಾವು ಹೇಗೆ ಒಳ್ಳೆಯ ವೇಷದಲ್ಲಿ ಒಳ್ಳೆಯ

ಬಟ್ಟೆಗಳನ್ನು ಹಾಕಿಕೊಂಡು ಚೊಕ್ಕಟವಾಗಿರುವೆವೋ ಹಾಗೆಯೇ ಅಲ್ಲಿಯೂ ಕಂಡೆವು' ಎಂದು ನುಡಿದರು. ಪ್ರಜಾಪತಿಯು ''ಸರಿ, ಹಾಗಾದರೆ ಇದೇ ಆತ್ಮನು; ಇದೇ ನಾಶವಿಲ್ಲದ ಅಂಜಿಕೆಯಿಲ್ಲದ ಬ್ರಹ್ಮವು'' ಎಂದನು.

ಗುರುವಿನ ಮಾತನ್ನು ಕೇಳಿ ಇಬ್ಬರೂ ಮನಶ್ಶಾಂತಿಯಿಂದ ಹಿಂತಿರುಗಿದರು. ಅವರು ಹೊರಟಿದ್ದನ್ನು ಕಂಡು ಪ್ರಜಾಪತಿಯು 'ಈ ರಹಸ್ಯವನ್ನು ಅರಿತುಕೊಳ್ಳದೆ ಇವರಿಬ್ಬರಲ್ಲಿ ಯಾವನು ಹೊರಟು ಹೋಗುವನೋ, ಯಾವನು ಈಗ ತಾನು ತಿಳಿದುಕೊಂಡದ್ದೇ ನಿಶ್ಚಯವೆಂದುಕೊಳ್ಳುವನೋ ಅವನು ಕೆಟ್ಟುಹೋಗುತ್ತಾನೆ'' ಎಂದನು. ವಿರೋಚನನು 'ಶರೀರವನ್ನೇ ತಾನು ತಟ್ಟೆಯಲ್ಲಿ ನೋಡಿದ್ದು, ಶರೀರವೇ ಆತ್ಮನು'ಎಂದುಕೊಂಡು ಅಸುರರ ಬಳಿಗೆ ಹೋದನು. ''ಶರೀರವನ್ನೇ ಪೂಜಿಸತಕ್ಕದ್ದು, ಶರೀರವನ್ನು ಗೌರವಿಸಿದರೆ ಎಲ್ಲವನ್ನೂ ಪಡೆದಂತಾಗುವದು. ಶರೀರಸುಖವೇ ಇಹಪರಸುಖವು'' ಎಂದು ಅವರಿಗೆಲ್ಲ ಬೋಧಿಸಿದನು. ಇದೇ ಅಸುರರಿಗೆಲ್ಲ ಜೀವನದ ಸೂತ್ರವಾಯಿತು !

ಆದರೆ ಇಂದ್ರನು ''ಇದೇನು ? ನೆರಳು ನಮ್ಮಂತೆ ಒಳ್ಳೆಯವೇಷದಿಂದ ಚೊಕ್ಕಟವಾಗಿ ಕಂಡದ್ದು ನಿಜ ; ಆದರೆ ನಾನು ಕುರುಡಾಗಿದ್ದರೆ ತಾನೂ ಕುರುಡನಾಗಿ ಕಾಣುತ್ತಿತ್ತು, ಅಂಗಹೀನನಾಗಿದ್ದರೆ ತಾನೂ ಅಂಗಹೀನನಾಗಿ ಕಾಣುತ್ತಿತ್ತು - ಶರೀರವು ನಾಶವಾದರೆ ಇದೂ ನಾಶವಾಗುವದಲ್ಲ ! ಈ ನೆರಳು ಹೇಗೆ ಆತ್ಮನಾದೀತು ? ಇದರಲ್ಲಿ ಯಾವ ಸುಖವನ್ನೂ ಕಾಣೆನಲ್ಲ !'' ಎಂದುಕೊಂಡು ಮತ್ತೆ ಹಿಂದಕ್ಕೆ ಬಂದನು.

ಆಮೇಲೆ ಪ್ರಜಾಪತಿಯು ತನ್ನ ಉಪದೇಶದ ರಹಸ್ಯವನ್ನು ಬಿಚ್ಚಿ ಹೇಳಿದನು. ಯಾವ ದೋಷವೂ ಇಲ್ಲದ ಆತ್ಮನೇ ನಮ್ಮಗಳಲ್ಲಿರುತ್ತಾನೆಂಬುದನ್ನು ಇಂದ್ರನಿಗೆ ತಿಳಿಸಿಕೊಟ್ಟನು. ಗುರುಗಳು ತತ್ತ್ವವನ್ನು ಹೇಳಿಕೊಡುವಾಗ ನಮಗೆ ಆದ ತಪ್ಪುತಿಳಿವಳಿಕೆಯನ್ನೇ ಸರಿಯೆಂದು ನಾವೇ ನಿಶ್ಚಯಿಸಿಬಿಡಬಾರದು. ತಾಳ್ಮೆಯಿಂದ ಮತ್ತೆ ಅವರನ್ನೇ ಕೇಳಿ ಅವರ ಪೂರ್ಣಾಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಹಾಗಿಲ್ಲದಿದ್ದರೆ ನಿಜವನ್ನು

ತಿಳಿದದ್ದರಿಂದ ಆಗುವ ಒಳ್ಳೆಯ ಫಲವು ಆಗುವದಕ್ಕೆ ಬದಲಾಗಿ ತಪ್ಪು ತಿಳಿವಳಿಕೆಯಿಂದಾಗುವ ಕೆಟ್ಟಫಲವೇ ನಮಗೆ ಬಂದೊದಗಬಹುದು.

------

## ೬. ಗುರುವಾಗುವದಕ್ಕೆ ಹವಣಿಸಬಾರದು

### (ಬೃಹದಾರಣ್ಯಕ)

ಹಿಂದಕ್ಕೆ **ಬಾಲಾಕಿಗಾರ್ಗ್ಯ**ನೆಂಬಾತನೊಬ್ಬ ಬ್ರಾಹ್ಮಣನಿದ್ದನು. ಅವನು ಒಮ್ಮೆ ಕಾಶಿಯ ರಾಜನಾದ ಅಜಾತಶತ್ರುವಿನ ಬಳಿಗೆ ಬಂದು ''ನಿನಗೆ ಬ್ರಹ್ಮವನ್ನು ಹೇಳಿಕೊಡಲೆ ?'' ಎಂದು ಕೇಳಿದನು. ಆಗಿನ ಕಾಲಕ್ಕೆ ಜನಕರಾಯನ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿತ್ತು. ಬ್ರಹ್ಮವಿದ್ಯೆಯನ್ನು ಕೇಳುವ ರಸಿಕನೂ ವಿದ್ಯಾವಂತರಿಗೆ ಸಂಭಾವನೆಯನ್ನು ಕೊಡಬಲ್ಲ ದಾತನೂ ಜನಕನೇ ಎಂಬ ವಾರ್ತೆಯು ಜನರಿಗೆಲ್ಲ ಮುಟ್ಟಿತ್ತು. ಬಾಲಾಕಿಯು ತಾನು ಬ್ರಹ್ಮಜ್ಞಾನಿ ಎಂಬ ಹೆಮ್ಮೆಯಿಂದ ಬ್ರಹ್ಮೋಪದೇಶವನ್ನು ಮಾಡುವೆನೆಂದು ಹೇಳಿಕೊಂಡರೂ ಅಷ್ಟುಮಾತ್ರದಿಂದಲೇ ಅರಸನು ಸಂತುಷ್ಟನಾಗಿ ''ಸ್ವಾಮಿ, ಇಷ್ಟುಮಾತ್ರ ಹೇಳಿದಿರಲ್ಲ, ಅದೇ ಸಾಕು. ಈ ಮಾತಿಗೆ ಸಾವಿರ ಗೋವುಗಳನ್ನು ದಾನವಾಗಿ ಕೊಡುತ್ತೇನೆ'' ಎಂದನು.

ಅಜಾತಶತ್ರುವು ನಿಜವಾಗಿಯೂ ಒಳ್ಳೆಯ ಬ್ರಹ್ಮಜ್ಞಾನಿಯಾಗಿದ್ದನು. ಬಾಲಾಕಿಯು ತೀರ ಅಜ್ಞಾನಿಯಲ್ಲ; ಅವನು ಹೊರಗೆ ಸೂರ್ಯಮಂಡಲವೇ ಮುಂತಾದವುಗಳಲ್ಲಿಯೂ ಒಳಗೆ ಕಣ್ಣಿನ ಇಂದ್ರಿಯದಲ್ಲಿಯೂ ಆ ಮೂಲಕ ಹೃದಯದಲ್ಲಿಯೂ ವ್ಯಾಪಿಸಿರುವ ಪರಮೇಶ್ವರನ ಸಗುಣರೂಪವನ್ನು ಉಪಾಸನೆಮಾಡುತ್ತಿದ್ದನು. ಆದರೆ ಅಜಾತಶತ್ರುವು ಪರಮಾತ್ಮನ ನಿಜವಾದ ಹೆಚ್ಚಿನ ಸ್ವರೂಪವನ್ನೇ ಅರಿತಿದ್ದನು. ಬಾಲಾಕಿಗಾರ್ಗ್ಯನು ಹೇಳಿದ ಉಪಾಸನೆಗಳನ್ನೆಲ್ಲ ಕೇಳಿ, ''ಇಷ್ಟೇನೆ ?'' ಎನ್ನಲು ಬ್ರಾಹ್ಮಣನು ''ಇಷ್ಟೇ, ನೀನೂ ನನ್ನಂತೆ ಉಪಾಸನೆಮಾಡು'' ಎಂದನು.

ಆಗ ಅಜಾತಶತ್ರುವು ''ನೀವು ಹೇಳಿದ ಉಪಾಸನೆಗಳೆಲ್ಲವೂ ನನಗೆ ತಿಳಿದಿವೆ ; ಅವುಗಳ ಫಲವೂ ನನಗೆ ಗೊತ್ತಿದೆ. ಆದರೆ ಇಷ್ಟುಮಾತ್ರದಿಂದ ಪರವಸ್ತುವಿನ ಸ್ವರೂಪವು ತಿಳಿದಂತಾಗುವದಿಲ್ಲ'' ಎಂದನು.

ಗಾರ್ಗ್ಯನಿಗೆ ಆಗ ತನ್ನ ನಿಜಸ್ಥಿತಿಯು ಮನವರಿಕೆಯಾಯಿತು. ''ಅಯ್ಯ, ರಾಜನೆ, ನಾನು ನಿನ್ನ ಬಳಿಯಲ್ಲಿ ಶಿಷ್ಯನಾಗಿ ಪರಮಾತ್ಮವಸ್ತುವನ್ನು ತಿಳಿದುಕೊಳ್ಳಬೇಕೆಂದು ಬಯಸುತ್ತೇನೆ. ದಯಮಾಡಿ ನನಗೆ ಅದನ್ನು ಹೇಳಿಕೊಡು'' ಎಂದು ಕೇಳಿಕೊಂಡನು.

ಆದರೆ ದೊರೆಯು ಉತ್ತಮವರ್ಣದವನಾದ ಬ್ರಾಹ್ಮಣನ ಮೇಲೆ ಗೌರವವಿಟ್ಟು ''ಬ್ರಾಹ್ಮಣನು ಕ್ಷತ್ರಿಯನನ್ನು ಗುರುಭಾವದಿಂದ ಪೂಜಿಸುವದು ಸರಿಯಲ್ಲ, ಅದು ಶಾಸ್ತ್ರಪದ್ಧತಿಗೆ ವಿರುದ್ಧವಾಗುತ್ತದೆ. ಆದ್ದರಿಂದ ತಾವು ಪೂಜ್ಯಸ್ಥಾನದಲ್ಲಿಯೇ ಇರಬೇಕು. ನಾನು ನನಗೆ ತಿಳಿದದ್ದನ್ನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ'' ಎಂದು ಮುಂದೆ ಅವನಿಗೆ ಎಲ್ಲಕ್ಕೂ ಹೆಚ್ಚಿನ ಪರಮಾರ್ಥದ ಸ್ವರೂಪವನ್ನು ತಿಳಿಸಿಕೊಟ್ಟನು.

ನಿಜವಾದ ಗುರುತ್ವವು ಶಿಷ್ಯನಿಂದ ಮಾಡಿಸಿಕೊಳ್ಳುವ ಸೇವೆಯಿಂದ ಬರುವದಿಲ್ಲ, ಉನ್ನತವಾದ ಕುಲದಿಂದಲೂ ಬರುವದಿಲ್ಲ. ತತ್ತ್ವವನ್ನು ತಿಳಿದವನು ಹೇಗೆ ಯಾವ ಸ್ಥಿತಿಯಲ್ಲಿದ್ದರೂ ಗುರುವೇ. ಅವನೇ ಪೂಜ್ಯನು.

------

## ೭. ತತ್ತ್ವವನ್ನು ಹುಡುಕುವದರಲ್ಲಿ ಯಾವಾಗಲೂ ಆಶೆಯಿರಬೇಕು

### (ಪ್ರಶ್ನೋಪನಿಷತ್ತು)

ಸುಕೇಶ ಭಾರದ್ವಾಜ, ಶೈಬ್ಯ ಸತ್ಯಕಾಮ, ಸೌರ್ಯಾಯಣಿ ಗಾರ್ಗ್ಯ, ಕೌಸಲ್ಯ ಅಶ್ವಲಾಯನ, ಭಾರ್ಗವ ವೈದರ್ಭಿ, ಕಬಂಧಿ ಕಾತ್ಯಾಯನ - ಈ ಆರು

ಜನರು ಪರಮೇಶ್ವರನ ಆರಾಧನೆಯಲ್ಲಿ ತತ್ಪರರಾಗಿದ್ದರು ; ಆದರೂ ಅವರಿಗೆ ಅಷ್ಟುಮಾತ್ರದಿಂದ ತೃಪ್ತಿಯಾಗಿರಲಿಲ್ಲ. ಪರಮಾತ್ಮನ ಎಲ್ಲಕ್ಕೂ ಮಿಗಿಲಾದ ಸ್ವರೂಪವೇನು ?- ಎಂಬುದನ್ನು ತಿಳಿಯಬೇಕೆಂದು ಪೂಜ್ಯರಾದ **ಪಿಪ್ಪಲಾದರ** ಬಳಿಗೆ ಕೈಯಲ್ಲಿ ಸಮಿತ್ತನ್ನು ಹಿಡಿದುಕೊಂಡು ಬಂದರು. 'ಇವರೇ ನನಗೆ ಇದೆಲ್ಲವನ್ನೂ ಹೇಳಿಕೊಡುವರು' ಎಂದು ಅವರಿಗೆ ನಂಬಿಕೆಯಾಗಿ ಅವರ ಬಳಿಗೆ ಶಿಷ್ಯರಾಗಿ ಬಂದು ಸೇರಿದರು.

ಪಿಪ್ಪಲಾದರು 'ನೀವುಗಳು ಹಿಂದೆಯೂ ಬ್ರಹ್ಮಚರ್ಯೆಯನ್ನೂ ತಪಸ್ಸನ್ನೂ ಮಾಡಿದವರು ; ಆದರೂ ಮತ್ತೊಂದು ಸಲ ಒಂದು ವರ್ಷ ಬ್ರಹ್ಮಚರ್ಯೆಯಿಂದ ತಪೋನಿಷ್ಠರಾಗಿ ಇರಿ. ಆಮೇಲೆ ನಿಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿರಿ. ನಮಗೆ ತಿಳಿದರೆ ಅದೆಲ್ಲವನ್ನೂ ತಿಳಿಸುವೆವು' ಎಂದರು.

ಆಮೇಲೆ ಆರೂ ಜನರೂ ಒಬ್ಬೊಬ್ಬರಾಗಿ ಈ ಆರು ಪ್ರಶ್ನೆಗಳನ್ನು ಮಾಡಿದರು : (೧) ಈ ಜೀವರುಗಳು ಏತಕ್ಕೆ ಹುಟ್ಟುತ್ತಾರೆ ? (೨) ಶರೀರವನ್ನು ತಡೆದಿಟ್ಟುಕೊಂಡಿರುವ ಕರಣಗಳು ಯಾವವು ? ತಮ್ಮ ಮಾಹಾತ್ಮ್ಯವನ್ನು ಬೆಳಗಿ ತೋರಿಸತಕ್ಕವು ಯಾವವು ? ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಿನದು ಯಾವದು ? (೩) ಪ್ರಾಣನು ಏತರಿಂದ ಹುಟ್ಟುತ್ತಾನೆ ? ಈ ಶರೀರದಲ್ಲಿ ಹೇಗೆ ಬಂದು ಹೇಗೆ ವ್ಯಾಪಾರಮಾಡುತ್ತಿರುತ್ತಾನೆ ? ಹೇಗೆ ಹೊರಟುಹೋಗುತ್ತಾನೆ ? ಒಳಗೂ ಹೊರಗೂ ಎಲ್ಲವನ್ನೂ ಇವನು ಹೇಗೆ ಹೇಗೆ ಧರಿಸಿಕೊಂಡಿರುತ್ತಾನೆ ? (೪) ಈ ಶರೀರದಲ್ಲಿ ನಿದ್ರೆ ಮಾಡುವ ಭಾಗಗಳು ಯಾವವು ? ಎಚ್ಚರವಾಗಿರುವವು ಯಾವವು ? ಕನಸನ್ನು ಕಾಣುವವರು ಯಾರು ? ನಿದ್ರೆಯಲ್ಲಿ ಆಗುವ ಸುಖವು ಯಾರದು ? ಆಗ ಎಲ್ಲರೂ ಯಾರಲ್ಲಿ ಸೇರಿರುತ್ತಾರೆ ? (೫) ಸಾಯುವವರೆಗೂ ಓಂಕಾರವನ್ನು ಧ್ಯಾನಮಾಡುವವನಿಗೆ ಯಾವ ಲೋಕವು ಸಿಕ್ಕುತ್ತದೆ ? (೬) ಹದಿನಾರು ಕಲೆಗಳುಳ್ಳ ಪುರುಷನು ಎಲ್ಲಿರುತ್ತಾನೆ ?

ಪಿಪ್ಪಲಾದರು ಎಲ್ಲಾ ಪ್ರಶ್ನೆಗಳಿಗೂ ಸಮರ್ಪಕವಾಗಿ ಉತ್ತರವನ್ನು ಹೇಳಿದರು. ಆಗ ಆರು ಜನರೂ ''ತಾವೇ ನಮ್ಮ ತಂದೆಗಳು, ಏಕೆಂದರೆ ಅಜ್ಞಾನವನ್ನು ದಾಟಿಸಿ ನಮ್ಮನ್ನು ಆಚೆಯ ದಡಕ್ಕೆ ಮುಟ್ಟಿಸಿರುತ್ತೀರಿ'' ಎಂದರು.

-------

# ೮. ಚರ್ಚೆಯಲ್ಲಿಯೂ ತಾಳ್ಮೆಯಿರಬೇಕು

## (ಬೃಹದಾರಣ್ಯಕ)

ಜನಕರಾಯನ ಹೆಸರನ್ನು ಹಿಂದೊಮ್ಮೆ ಸೂಚಿಸಿರುತ್ತೇವೆ. ಆತನು ಧರ್ಮದಲ್ಲಿಯೂ ಜ್ಞಾನದಲ್ಲಿಯೂ ಬಹಳ ಶ್ರದ್ಧೆಯುಳ್ಳ ಚಕ್ರವರ್ತಿಯು. ಒಮ್ಮೆ ಆತನು ಒಂದು ದೊಡ್ಡ ಯಜ್ಞವನ್ನು ಮಾಡಿಸಿದನು. ಅಲ್ಲಿಗೆ ಅವನು ಕುರುಪಾಂಚಾಲದೇಶಗಳಿಂದ ಬ್ರಾಹ್ಮಣರನ್ನು ಕರೆಯಿಸಿದ್ದನು.

ಜನಕನಿಗೆ ''ಇಲ್ಲಿ ಸೇರಿರುವ ಬ್ರಾಹ್ಮಣರಲ್ಲಿ ಎಲ್ಲರಿಗಿಂತಲೂ ತಿಳಿದವನು ಯಾರು ? ತಿಳಿಯಬೇಕು'' - ಎಂಬ ಇಚ್ಛೆಯುಂಟಾಯಿತು. ಆತನು ಒಂದು ಸಾವಿರ ಹಸುಗಳನ್ನು ಕೂಡಿಸಿ ಅವುಗಳ ಕೋಡಿಗೆ ಒಂದೊಂದು ಹಸುವಿಗೆ ಹತ್ತುಹತ್ತು ಹಾಗದ ಚಿನ್ನದ ಕೋಡಣಸನ್ನು ಹಾಕಿಸಿದನು. ಆಮೇಲೆ ನೆರೆದಿದ್ದ ಬ್ರಾಹ್ಮಣರನ್ನು ಕುರಿತು ''ಪೂಜ್ಯರುಗಳಿರಾ, ತಮ್ಮಲ್ಲಿ ಯಾರು ಹೆಚ್ಚಿನ ಬ್ರಹ್ಮಜ್ಞಾನಿಯೋ ಆತನು ಈ ಗೋಗಳನ್ನು ಹೊಡೆದುಕೊಂಡು ಹೋಗಬಹುದು'' ಎಂದು ಬಿನ್ನವಿಸಿಕೊಂಡನು. ಯಾವ ಬ್ರಾಹ್ಮಣನಿಗೂ ಹಸುಗಳನ್ನು ಮುಟ್ಟುವದಕ್ಕೆ ಎದೆ ಬರಲಿಲ್ಲ.

ಆಗ ಯಾಜ್ಞವಲ್ಕ್ಯರು ತಮ್ಮ ಬ್ರಹ್ಮಚಾರಿ ಶಿಷ್ಯನನ್ನು ಕುರಿತು ''ಎಲಾ ಸಾಮಶ್ರವ, ಇವುಗಳನ್ನು ಅಟ್ಟಿಕೊಂಡು ನಡೆ'' ಎಂದರು.

ಈ ಮಾತನ್ನು ಕೇಳಿದ ಮಿಕ್ಕ ಬ್ರಾಹ್ಮಣರಿಗೆ ಬಹಳ ಕೋಪವು ಬಂದಿತು. ''ಈತನು ನಮ್ಮೆಲ್ಲರಿಗಿಂತಲೂ ಬ್ರಹ್ಮಿಷ್ಠನೆ ? ಅದು ಹೇಗಾದೀತು ?'' ಎಂದು ಅವರು ಗೊಣಗುಟ್ಟುವದಕ್ಕೆ ಮೊದಲುಮಾಡಿದರು. ಜನಕನ ಯಜ್ಞಕ್ಕೆ ಋತ್ವಿಜನಾಗಿ ಬಂದಿದ್ದ ಅಶ್ವಲನೆಂಬಾತನು ''ಯಾಜ್ಞವಲ್ಕ್ಯನೆ, ನೀನೇ ಅಲ್ಲವೆ ನಮ್ಮೆಲ್ಲರಿಗಿಂತಲೂ ತಿಳಿದವನು ?'' ಎಂದು ಸಿಟ್ಟಿನಿಂದ ಕೇಳಿದನು.

ಯಾಜ್ಞವಲ್ಕ್ಯರು ವಿನಯದಿಂದ ''ಬ್ರಹ್ಮಿಷ್ಠನಾದ ಮಹಾತ್ಮನಿಗೆ ನಮ್ಮ ನಮಸ್ಕಾರ, ನಮಗೆ ಬೇಕಾದದ್ದು ಹಸುಗಳು'' ಎಂದು ಉತ್ತರವನ್ನಿತ್ತರು.

ಬಳಿಕ ಬ್ರಾಹ್ಮಣರು ಒಬ್ಬೊಬ್ಬರಾಗಿ ಹುರುಡಿನಿಂದ ಯಾಜ್ಞವಲ್ಕ್ಯರಿಗೆ ಪ್ರಶ್ನೆಗಳನ್ನು ಹಾಕುತ್ತಾ ಬಂದರು. ಅವರು ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದರು. ಆಗ ನಡೆದ ಬ್ರಾಹ್ಮಣರ ಸಂವಾದದಲ್ಲಿ ಕರ್ಮ, ಧ್ಯಾನ, ತತ್ತ್ವಜ್ಞಾನ- ಎಲ್ಲಾ ವಿಚಾರಗಳೂ ಅಡಕವಾಗಿವೆ.

ಕಟ್ಟಕಡೆಗೆ ವಿದಗ್ಧಶಾಕಲ್ಯನೆಂಬ ಬ್ರಾಹ್ಮಣನು ಒಂದು ಮಹಾಪ್ರಶ್ನೆಯನ್ನು ಹಾಕಿದನು. ಅದಕ್ಕೆ ಉತ್ತರವಾಗಿ ಯಾಜ್ಞವಲ್ಕ್ಯರು ಹೇಳಿದ ಉತ್ತರವು ಬಹಳ ಗಹನವಾಗಿರುತ್ತದೆ. ಪರಮಾತ್ಮನ ಅತಿಸೂಕ್ಷ್ಮತತ್ತ್ವವನ್ನು ಅವರು ವಿಸ್ತರಿಸಿದ್ದಲ್ಲದೆ ''ಆ ಸ್ವರೂಪವನ್ನು ನೀನು ತಿಳಿದು ಹೇಳದೆ ಹೋದರೆ ನಿನ್ನ ತಲೆ ಬಿದ್ದುಹೋಗಲಿ !'' ಎಂದರು. ಯಾಜ್ಞವಲ್ಕ್ಯರು ಮಹಾಜ್ಞಾನಿಗಳಾದ್ದರಿಂದ ಅವರ ಮಾತು ಸತ್ಯವಾಯಿತು. ಅವರನ್ನರಿಯದೆ ಕೆಣಕಿದ ಮಹಾಪರಾಧಕ್ಕಾಗಿ ಶಾಕಲ್ಯನ ತಲೆ ಬಿದ್ದುಹೋಯಿತು. ಮುಂದೆ ಅವನ ಅಸ್ಥಿಗಳನ್ನು ಕೂಡ ಕಳ್ಳರು ಅದು ಏನೋ ಬೆಲೆಯುಳ್ಳ ವಸ್ತುವೆಂಬ ಭ್ರಾಂತಿಯಿಂದ ಕದ್ದುಕೊಂಡು ಹೋದರು. ಅವನಿಗೆ ಉತ್ತರ ಸಂಸ್ಕಾರವು ಕೂಡ ನಡೆಯುವದು ಕಷ್ಟವಾಯಿತು. ಚರ್ಚೆಯಲ್ಲಿ ತತ್ತ್ವದ ಕಡೆಗೆ ಲಕ್ಷ್ಯವಿರಬೇಕೇ ಹೊರತು ಮನುಷ್ಯವ್ಯಕ್ತಿಯ ಕಡೆಗೆ ಲಕ್ಷ್ಯವಿಡಬಾರದು ; ವಿಚಾರದಲ್ಲಿ ರಾಗದ್ವೇಷಗಳಿಗೆ ಎಂದಿಗೂ ಎಡೆಗೊಡಬಾರದು - ಎಂಬುದು ಶಾಕಲ್ಯನ ದೃಷ್ಟಾಂತದಿಂದ ವ್ಯಕ್ತವಾಯಿತು.

------

# ೯. ಧನಸಂಪತ್ತಿಗಿಂತಲೂ ವಿದ್ಯಾಸಂಪತ್ತು ಹೆಚ್ಚಿನದು

## (ಛಾಂದೋಗ್ಯ)

**ಜಾನಶ್ರುತಿಪೌತ್ರಾಯಣ**ನೆಂಬುವನು ಒಬ್ಬ ದೊರೆ. ಅವನು ಶ್ರದ್ಧೆಯಿಂದ ಬಹುವಾಗಿ ದಾನಮಾಡುತ್ತಿದ್ದನು ; ದಿನದಿನವೂ ಸಾವಿರಾರು ಜನರಿಗೆ ಭೋಜನಮಾಡಿಸುತ್ತಿದ್ದನು. ಅವನು ತನ್ನ ದೇಶದಲ್ಲಿ ಎಲ್ಲೆಲ್ಲಿಯೂ ಅನ್ನಸತ್ರಗಳನ್ನು ಏರ್ಪಡಿಸಿದ್ದನು.

ಒಂದು ದಿನ ಅರಸನ ದಾತೃಗುಣಕ್ಕೆ ಸಂತೋಷಪಟ್ಟು ದೇವತೆಗಳು ಹಂಸರೂಪದಿಂದ ಆತನ ಉಪ್ಪರಿಗೆಯಮೇಲಿಂದ ಹಾರಿಹೋಗುತ್ತಿದ್ದರು. ಆ ಹಂಸಗಳಲ್ಲಿ ಒಂದು ಮತ್ತೊಂದನ್ನು ಕುರಿತು ''ಎಲಾ ಮಂದದೃಷ್ಟಿಯೆ, ಜಾನಶ್ರುತಿಪೌತ್ರಾಯಣನ ಬೆಳಕು ಅಂತರಿಕ್ಷವನ್ನೆಲ್ಲ ಹಬ್ಬಿದೆಯೆಂಬುದು ನಿನಗೆ ತಿಳಿಯದೆ ? ಕಾಲು ಚಾಚಬೇಡ, ಆ ಜ್ಯೋತಿಯು ಎಲ್ಲಾದರೂ ನಿನ್ನನ್ನು ಸುಟ್ಟುಬಿಟ್ಟೀತು, ಜೋಕೆ !'' ಎಂದಿತು.

ಆಗ ಮುಂದುಗಡೆ ಹೋಗುತ್ತಿದ್ದ ಹಂಸವು ''ಎಲಾ, ಇವನೇನು ಅಂಥ ಮಹಾತ್ಮನೆಂದು ಹೇಳುತ್ತೀಯೆ ? ಇವನು ಆ ನೊಗದ ಬಳಿಯಿರುವ **ರೈಕ್ವ**ನೆಂಬಂತೆ ಹೇಳುತ್ತೀಯಲ್ಲ !'' ಎಂದಿತು.

ಆಗ ಮೊದಲನೆಯ ಹಂಸವು ''ಆ ನೊಗದ ಬಳಿಯ ರೈಕ್ವನು ಎಂಥವನು ?'' ಎನ್ನಲು ಇನ್ನೊಂದು ಹಂಸವು ಹೇಳುತ್ತದೆ : ''ಪಗಡೆಯ ಆಟದಲ್ಲಿ ಕೃತ ಎಂಬ ನಾಲ್ಕು ಗರವು ಬಿದ್ದರೆ ಹೇಗೆ ತ್ರೇತಾ, ದ್ವಾಪರ, ಕಲಿ- ಎಂಬ ಮಿಕ್ಕ ಗರಗಳೂ ಬಿದ್ದಂತೆಯೇ ಬಂದು ಸೇರಿಕೊಳ್ಳುವವೋ ಹಾಗೆ ಪ್ರಜೆಗಳು ಮಾಡಿದ ಪುಣ್ಯವೆಲ್ಲವೂ ಆ ರೈಕ್ವನಿಗೆ ಸೇರಿಕೊಳ್ಳುವವು, ಅಂಥ ಪರತತ್ತ್ವವನ್ನು ಆತನು ತಿಳಿದಿರುತ್ತಾನೆ !''

ಆ ಮಾತನ್ನು ಕೇಳಿದ ಜಾನಶ್ರುತಿಯು ಅದೇ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಬೆಳಗ್ಗೆ ತನ್ನನ್ನು ಹೊಗಳುವ ವಂದಿಗಳನ್ನು ಕಂಡು

''ಎಲೆ, ಆ ನೊಗದ ಬಳಿಯಿರುವ ರೈಕ್ವನನ್ನು ಹೊಗಳುವಂತೆ ನನ್ನನ್ನು ಹೊಗಳುವಿರಲ್ಲ!'' ಎಂದನು. ಆಮೇಲೆ ಆ ರೈಕ್ವನನ್ನು ಕಂಡುಹಿಡಿಯುವದಕ್ಕೆ ತನ್ನ ಕಡೆಯವರನ್ನು ಕಳುಹಿಸಿಕೊಟ್ಟನು. ಬಹಳಹೊತ್ತು ಹುಡುಕಿದಬಳಿಕ ರೈಕ್ವನು ದೂತನೊಬ್ಬನಿಗೆ ಸಿಕ್ಕಿದನು. ಆತನು ಒಂದು ಗಾಡಿಯ ಕೆಳಗೆ ಕುಳಿತು ಮೈಮೇಲಿನ ಕಜ್ಜಿಯನ್ನು ತುರಿಸಿಕೊಳ್ಳುತ್ತಿದ್ದನು. ''ಸ್ವಾಮಿ, ತಾವೇಯೋ ನೊಗದ ಬಳಿಯ ರೈಕ್ವರೆಂಬುವರು ?' ಎಂದು ದೂತನು ಕೇಳಲಾಗಿ ಆತನು ''ನಾನೇ ಕಾಣೋ !'' ಎಂದನು. ಬಳಿಕ ದೂತನು ರಾಜನಲ್ಲಿಗೆ ಬಂದು ಎಲ್ಲವನ್ನೂ ಬಿನ್ನವಿಸಿದನು.

ಆಗ ರಾಜನು ಆರುನೂರು ಹಸುಗಳು, ಒಂದು ಕಂಠೀಸರ, ಒಂದು ಹೇಸರಕತ್ತೆಯ ರಥ- ಇಷ್ಟನ್ನೂ ತೆಗೆದುಕೊಂಡು ಬಂದು ರೈಕ್ವನಿಗೊಪ್ಪಿಸಿ ''ಸ್ವಾಮಿ, ಇದನ್ನು ಸ್ವೀಕರಿಸಿ ತಾವು ಉಪಾಸನೆಮಾಡುತ್ತಿರುವ ದೇವತೆಯ ಸ್ವರೂಪವನ್ನು ತಿಳಿಸಬೇಕು'' ಎಂದು ಕೇಳಿಕೊಂಡನು. ರೈಕ್ವನು ''ಎಲಾ ಶೂದ್ರ, ಈ ಹಾರವೂ ಈ ಗಾಡಿಯೂ ಈ ಹಸುಗಳೂ ನಿನ್ನಲ್ಲಿಯೇ ಇರಲಿ ! ನನಗೇತಕ್ಕೆ ?'' ಎಂದನು. ಮತ್ತೂ ಒಮ್ಮೆ ಅರಸನು ಒಂದು ಸಾವಿರ ಹಸುಗಳು, ಅದೇ ಹಾರ, ರಥ- ಇಷ್ಟನ್ನೂ ತೆಗೆದುಕೊಂಡು ಬಂದು ''ಸ್ವಾಮಿ, ಇಗೋ ಈ ಪದಾರ್ಥಗಳನ್ನು ಸ್ವೀಕರಿಸಬೇಕು. ಈ ನನ್ನ ಮಗಳನ್ನು ಮದುವೆಯಾಗಿ ತಾವು ಗೃಹಸ್ಥರಾಗಿರಬಹುದು. ತಮ್ಮ ವಾಸಕ್ಕೆ ಒಂದು ಗ್ರಾಮವನ್ನೂ ಕೊಟ್ಟಿರುತ್ತೇನೆ. ದಯವಿಟ್ಟು ತಾವು ಉಪಾಸನೆಮಾಡುತ್ತಿರುವ ದೇವತೆಯ ಸ್ವರೂಪವನ್ನು ನನಗೆ ತಿಳಿಸಿಕೊಡಬೇಕು'' ಎಂದು ಬೇಡಿಕೊಂಡನು.

ಆಗ ಪ್ರೀತನಾಗಿ ರೈಕ್ವನು ರಾಜನಿಗೆ ''ಸಂವರ್ಗವಿದ್ಯೆ''ಯೆಂಬ ಪರಮೇಶ್ವರೋಪಾಸನೆಯ ಕ್ರಮವನ್ನು ಹೇಳಿಕೊಟ್ಟನು. ರಾಜನು ರೈಕ್ವನಿಗೆ ಕೊಟ್ಟ ಊರುಗಳಿಗೆ ಅಂದಿನಿಂದ **ರೈಕ್ವಪರ್ಣ** ಎಂಬ ಹೆಸರು ಬಂದಿತು.

ಜಾನಶ್ರುತಿಯು ಧನಸಂಪತ್ತಿಯುಳ್ಳವನಾದರೂ, ದಾನಶೂರನೆಂಬ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದರೂ, ಬಡಬ್ರಹ್ಮಚಾರಿಯಾದ ರೈಕ್ವನಲ್ಲಿದ್ದ

ಬ್ರಹ್ಮವಿದ್ಯೆಯೇ ಹೆಚ್ಚೆಂದು ತಿಳಿದು ಅದಕ್ಕಾಗಿ ಆತನನ್ನು ಅನುಸರಿಸಿದನು. ರೈಕ್ವನು ಮನೆ, ಬಾಗಿಲು - ಏನೊಂದೂ ಇಲ್ಲದವನಾದರೂ ಆ ವಿದ್ಯೆಯ ಹೆಚ್ಚುಗಾರಿಕೆಯಿಂದ ದೊರೆಯನ್ನು ಕೂಡ ದಿಟ್ಟತನದಿಂದ ಮಾತನಾಡಿಸ ಬಲ್ಲವನಾಗಿದ್ದನು.

------

## ೧೦. ಬ್ರಹ್ಮಜ್ಞಾನಿಯು ಎಂಥ ದುರವಸ್ಥೆಯಲ್ಲಿದ್ದರೂ ಪೂಜ್ಯನೇ

(ಛಾಂದೋಗ್ಯ)

ಒಂದಾನೊಂದು ಕಾಲದಲ್ಲಿ ಕುರುದೇಶದ ಪೈರುಪಚ್ಚೆಗಳಿಗೆಲ್ಲ ಆಲಿಕಲ್ಲು ಮಳೆ ಬಂದು ಹಾಳಾಗಿಹೋಗಿಬಿಟ್ಟವು. ಎಲ್ಲೆಲ್ಲಿಯೂ ದುರ್ಭಿಕ್ಷವಾಗಿ ಬಿಟ್ಟತ್ತು. ಇಂಥ ಸಂದರ್ಭದಲ್ಲಿ **ಉಷಸ್ತಿಚಾಕ್ರಾಯಣ** ನೆಂಬಾತನು ಚಿಕ್ಕವಯಸ್ಸಿನ ತನ್ನ ಹೆಂಡತಿಯೊಡನೆ ಹೊಟ್ಟೆಯಪಾಡಿಗಾಗಿ ಅತ್ತಿತ್ತ ಅಡ್ಡಾಡುತ್ತಾ ಇದ್ದನು. ಅವನು ಒಂದು ದಿನ ಒಬ್ಬ ಮಾವಟಿಗನ ಬಳಿಗೆ ಬಂದು ಭಿಕ್ಷೆಯನ್ನು ಕೇಳಿದನು.

ಮಾವಟಿಗನು ''ಸ್ವಾಮಿ, ನಾನು ಊಟಕ್ಕೆ ಕುಳಿತಿದ್ದೇನೆ; ಇಗೋ ಇಲ್ಲಿ ತಟ್ಟೆಯಲ್ಲಿ ಬಡಿಸಿಕೊಂಡಿರುವ ಹುರುಳಿಯನ್ನು ಬಿಟ್ಟರೆ ಮತ್ತೇನೂ ಇಲ್ಲವೇ ಇಲ್ಲ. ತಮಗೆ ಏನು ಭಿಕ್ಷೆಯನ್ನು ಕೊಟ್ಟೇನು ?'' ಎಂದನು.

ಚಾಕ್ರಾಯಣನು ''ಅಯ್ಯ, ಆ ಹುರುಳಿಯನ್ನೇ ಸ್ವಲ್ಪ ಕೊಡು'' ಎನ್ನಲು ಮಾವಟಿಗನು ಅದನ್ನು ಸ್ವಲ್ಪ ಎತ್ತಿಕೊಟ್ಟನು. ''ತಿಂದು ನೀರು ಕುಡಿಯಿರಿ'' ಎಂದು ತನ್ನ ಬಳಿಯಲ್ಲಿದ್ದ ನೀರನ್ನು ಕೊಡುವದಕ್ಕೆ ಹೋದನು.

ಆದರೆ ಉಷಸ್ತಿಚಾಕ್ರಾಯಣನು ''ಬೇಡ, ನಿನ್ನ ಎಂಜಲುನೀರು

ಕುಡಿದಂತೆ ಆದೀತು'' ಎಂದನು. ಮಾವಟಿಗನು ಆಶ್ಚರ್ಯದಿಂದ 'ಸ್ವಾಮಿ, ಈ ಹುರುಳಿಯೂ ಎಂಜಲೇ ಅಲ್ಲವೆ ?' ಎನ್ನಲು, ಬ್ರಾಹ್ಮಣನು 'ಅಪ್ಪ, ಇದನ್ನು ತಿನ್ನದಿದ್ದರೆ ನಾನು ಬದುಕುವ ಸಂಭವವೇ ಇರಲಿಲ್ಲ; ಆದರೆ ಕುಡಿಯುವದಕ್ಕೆ ನೀರು ಎಲ್ಲಿಯಾದರೂ ಸಿಕ್ಕಿಯೇ ಸಿಕ್ಕುತ್ತದೆ, ಹೀಗಿರುವಲ್ಲಿ ನಿನ್ನ ಎಂಜಲು ನೀರನ್ನೇಕೆ ಕುಡಿಯಬೇಕು ?' ಎಂದು ಉತ್ತರವನ್ನು ಕೊಟ್ಟನು.

ಚಾಕ್ರಾಯಣನು ತಾನು ತಿಂದು ಉಳಿದ ಹುರುಳಿಯನ್ನು ಹೆಂಡತಿಗೂ ಕೊಟ್ಟನು. ಆಕೆಗೆ ಆಗಲೇ ಅನ್ನವು ಸಿಕ್ಕಿದ್ದರಿಂದ ಅದನ್ನು ಹಾಗೆಯೇ ಒಂದು ಕಡೆ ಇಟ್ಟುಕೊಂಡಳು.

ಮಾರನೆಯ ದಿನವೂ ಆ ಬ್ರಾಹ್ಮಣನಿಗೆ ಆಹಾರವು ಸಿಕ್ಕಲಿಲ್ಲ. ಅವನು ಹೆಂಡತಿಯನ್ನು ಕುರಿತು ''ಅಯ್ಯೋ, ಇಂದಿನಮಟ್ಟಿಗೆ ಒಂದಿಷ್ಟಾದರೂ ಆಹಾರವು ಸಿಕ್ಕಿದರೆ ಸಾಕು, ಮುಂದಕ್ಕೆ ಅರಮನೆಗೆ ಹೋಗಿ ಹಣವನ್ನು ಸಂಪಾದಿಸಿಕೊಳ್ಳಬಹುದು. ಅರಸನು ಯಾಗಮಾಡುವನಂತೆ. ಅಲ್ಲಿ ನನ್ನನ್ನು ಎಲ್ಲಾ ಋತ್ವಿಕ್ಕರ ಕರ್ಮಕ್ಕೂ ಕರೆದಾನು !'' ಎಂದನು. ಹೆಂಡತಿಯು 'ಪತಿಯೆ, ನಿನ್ನೆ ನನ್ನ ಕೈಗೆ ತಾವು ಕೊಟ್ಟ ಈ ಹುರುಳಿಯು ಮಾತ್ರ ಇದೆ' ಎಂದಳು.

ಬ್ರಾಹ್ಮಣನು ಅದೇ ತಂಗುಳುಹುರುಳಿಯನ್ನೇ ತಿಂದು ರಾಜನ ಯಜ್ಞವು ನಡೆಯುತ್ತಿದ್ದಲ್ಲಿಗೆ ಬಂದನು. ಅಲ್ಲಿ ಯಜ್ಞದ ಋತ್ವಿಕ್ಕರೊಡನೆ ಆತನು ಮಾಡಿದ ಸಂಭಾಷಣೆಯಿಂದ ಇವನು ಬ್ರಹ್ಮಜ್ಞಾನಿಯಾದ ''ಉಷಸ್ತಿ ಚಾಕ್ರಾಯಣ''ಎಂದು ತಿಳಿದ ರಾಜನು ಬ್ರಾಹ್ಮಣನಿಗೆ ಬೇಕಾದ ಹಾಗೆ ಸನ್ಮಾನವನ್ನು ಮಾಡಿದನು. ಆಪದ್ಧರ್ಮವಾಗಿ ಜುಗುಪ್ಸಿತವಾದ ಕರ್ಮವನ್ನು ಮಾಡಿದರೂ ಜ್ಞಾನಿಯಾದ ಚಾಕ್ರಾಯಣನು ನಿರ್ದುಷ್ಟನಾಗಿ ಪರಿಪೂಜ್ಯನೇ ಆದನು.

------

# ೧೧. ಇಹಪರಸುಖಗಳಿಗಿಂತ ಬ್ರಹ್ಮಜ್ಞಾನವೇ ಹೆಚ್ಚಿನದು

## (ಬೃಹದಾರಣ್ಯಕ)

**ಯಾಜ್ಞವಲ್ಕ್ಯರು** ಮಹಾಮಹಿಮರು. ಅವರಿಗೆ ಜನಕಚಕ್ರವರ್ತಿಯೂ ಗೌರವವನ್ನು ತೋರಿಸುತ್ತಿದ್ದನು. ವಿದ್ಯೆಯಲ್ಲಿ ಇವರಿಗೆ ಸರಿಯಿಲ್ಲವೆಂಬ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿತ್ತು. ಅವರು ಜನಕನ ಯಾಗದ ಸಮಯದಲ್ಲಿ ಬ್ರಾಹ್ಮಣರೊಡನೆ ವಾದವನ್ನು ಮಾಡಿ ಚಿನ್ನದ ಕೋಡಣಸಿನ ಸಾವಿರ ಹಸುಗಳನ್ನು ಗೆದ್ದುಕೊಂಡ ಕಥೆಯನ್ನು ಹಿಂದೆಯೇ ತಿಳಿಸಿದ್ದೇವೆ. ಆ ಮಹಾತ್ಮರಿಗೆ ಮನೆಯಲ್ಲಿಯೂ ಆದರ್ಶಕುಟುಂಬವಿತ್ತು. ಅವರಿಗೆ ಗೃಹಸ್ಥಧರ್ಮದಲ್ಲಿ ಎಲ್ಲಾ ಬಗೆಯಿಂದಲೂ ತೃಪ್ತಿಕರವಾಗಿ ಸಹಾಯವನ್ನು ಮಾಡಬಲ್ಲ **ಕಾತ್ಯಾಯಿನಿ** ಎಂಬ ಒಬ್ಬ ಧರ್ಮಪತ್ನಿಯಿದ್ದಳು ; ವಿದ್ಯಾವತಿಯಾಗಿ ಅವರ ಮೆಚ್ಚುಗೆಗೆ ಪಾತ್ರಳಾಗಿದ್ದ **ಮೈತ್ರೇಯಿ** ಎಂಬ ಮತ್ತೊಬ್ಬ ಪತ್ನಿಯೂ ಇದ್ದಳು.

ಹೀಗಿದ್ದರೂ ಯಾಜ್ಞವಲ್ಕ್ಯರು ಇಂಥ ಸುಖಸಂಪತ್ತೆಲ್ಲವನ್ನೂ ತೊರೆದು ಯಾವಾಗಲೂ ಬ್ರಹ್ಮಚಿಂತನೆಯಲ್ಲಿಯೇ ಕಾಲವನ್ನು ಕಳೆಯಬೇಕೆಂದು ಮನಸ್ಸುಮಾಡಿದರು. ತಾವು ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಬಯಸಿ ತಮ್ಮ ಇಬ್ಬರು ಹೆಂಡತಿಯರಿಗೂ ತಮ್ಮ ಆಸ್ತಿಯನ್ನು ಪಾಲುಮಾಡಿಕೊಡಬೇಕೆಂದು ಮೈತ್ರೇಯಿಯನ್ನು ಕರೆದು - ''ಎಲೆ, ಮೈತ್ರೇಯಿ ; ನಾನು ಸಂನ್ಯಾಸಿಯಾಗಬೇಕು, ನನಗೆ ಅನುಮತಿಯನ್ನು ಕೊಡಿರಿ; ನಿಮ್ಮಿಬ್ಬರಿಗೂ ನನ್ನ ಧನವನ್ನು ಪಾಲುಮಾಡಿಕೊಟ್ಟು ಹೊರಡುತ್ತೇನೆ'' ಎಂದರು.

**ಮೈತ್ರೇಯಿ** ಬಹಳ ವಿವೇಕಶಾಲಿನಿ. ಆಕೆಯು ''ಸ್ವಾಮಿ, ಇಡಿಯ ಭೂಮಿಯೇ ಧನಪೂರ್ಣವಾಗಿದ್ದರೆತಾನೆ ಮೋಕ್ಷವು ದೊರಕೀತೆ ?''

ಎಂದಳು. ಯಾಜ್ಞವಲ್ಕ್ಯರು ''ಇಲ್ಲ, ಹಣದಿಂದ ಮೋಕ್ಷದ ಆಶೆಯನ್ನು ಮಾಡುವಹಾಗಿಲ್ಲ ; ಎಲ್ಲರಂತೆ ನೀನೂ ಸುಖವಾಗಿರುವೆ, ಅಷ್ಟೆ'' ಎಂದರು. ಆಗ ಅವಳು ''ಸ್ವಾಮಿ, ಹಾಗಾದರೆ ಪರಮಪುರುಷಾರ್ಥವನ್ನು ಕೊಡಲಾರದ ವಿತ್ತದಿಂದ ನನಗೆ ಆಗಬೇಕಾದದ್ದೇನು ? ಯಾವದನ್ನು ಪಡೆದರೆ ನನಗೆ ಮುಕ್ತಿಯಾಗುವದೋ ಅದನ್ನೇ ನನಗೆ ತಿಳಿಯಹೇಳಿರಿ'' ಎಂದು ಕೇಳಿಕೊಂಡಳು.

ಯಾಜ್ಞವಲ್ಕ್ಯರು ಆ ಸಮಯದಲ್ಲಿ ಮೈತ್ರೇಯಿಗೆ ಉಪದೇಶಮಾಡಿದ ಪರತತ್ತ್ವವು ಅಮೂಲ್ಯವಾಗಿರುತ್ತದೆ. ಪರಮೇಶ್ವರನು ನಮ್ಮ ಹೃದಯ ದಲ್ಲಿಯೇ ಇದ್ದು ನಮ್ಮ ಆತ್ಮನೇ ಆಗಿರುತ್ತಾನೆಂಬುದನ್ನೂ ಆತ್ಮನಿಗಾಗಿ ಮಿಕ್ಕದ್ದೆ ಲ್ಲವೂ ಇರುವದೇ ಹೊರತು, ಮಿಕ್ಕದ್ದು ಯಾವದಕ್ಕಾಗಿಯೂ ಆತ್ಮನಿಲ್ಲ ; ಗಂಡ, ಹೆಂಡತಿ, ಮಕ್ಕಳು, ಹಣಕಾಸು, ಜಾತಿ, ಧರ್ಮ, ಲೋಕಗಳು, ದೇವತೆಗಳು, ಪ್ರಾಣಿಗಳು - ಈ ಎಲ್ಲವೂ ನಮ್ಮ ಆತ್ಮನಾಗಿರುವ ಪರಮೇಶ್ವರ ನಿಗಾಗಿಯೇ ಪ್ರಿಯವಾಗಿರುತ್ತವೆ ; ನಮ್ಮ ಮೇಲೆ ನಮಗೆ ಎಲ್ಲಕ್ಕಿಂತಲೂ ಹೆಚ್ಚಿನ ಪ್ರೀತಿಯಿರುವದಕ್ಕೆ ಎಲ್ಲಕ್ಕೂ ಹೆಚ್ಚಿನ ಆತ್ಮನೇ ಕಾರಣ ಎಂಬುದನ್ನೂ ವಿಸ್ತಾರವಾಗಿ ಅವರು ಬೋಧಿಸಿರುತ್ತಾರೆ.

------

## ೧೨. ನಮ್ಮ ಶಕ್ತಿಯೆಲ್ಲವೂ ಪರಮಾತ್ಮನಿಂದ ಬಂದದ್ದು

(ಕೇನ)

ಒಂದಾನೊಂದು ಕಾಲದಲ್ಲಿ ದೇವತೆಗಳಿಗೂ ಅಸುರರಿಗೂ ಒಂದು ದೊಡ್ಡ ಸಂಗ್ರಾಮವಾಯಿತು. ಆ ಯುದ್ಧದಲ್ಲಿ ದೇವತೆಗಳೇ ಗೆದ್ದರು, ಅಸುರರು ಸೋತರು.

ದೇವತೆಗಳಿಗೆ ಈಗ ಹೆಚ್ಚಿನ ಹೆಮ್ಮೆಯು ಬಂದಿತು. ಅವರಲ್ಲಿ

ಒಬ್ಬೊಬ್ಬರೂ ''ನಾನೇ ಗೆದ್ದೆನು. ನನ್ನಿಂದಲೇ ಜಯವಾಯಿತು, ನನ್ನ ಮಹಿಮೆಯೇ ಇದು'' ಎಂದುಕೊಳ್ಳುವದಕ್ಕೆ ಮೊದಲುಮಾಡಿದರು.

ಪರಮಾತ್ಮನು ಕೂಡಲೆ ಅವರ ಮುಂದೆ ಒಂದಾನೊಂದು ಅದ್ಭುತವಾದ ಯಕ್ಷರೂಪವನ್ನು ತಾಳಿ ನಿಂತನು. ಅದನ್ನು ನೋಡಿ ಅವರೆಲ್ಲರೂ ಬೆರಗಾಗಿ ''ಇದೇನು ಅದ್ಭುತಭೂತವಿದು !'' ಎಂದು ತಮ್ಮತಮ್ಮೊಳಗೇ ಯೋಚಿಸಲಾರಂಭಿಸಿದರು.

ಅವರು ಮೊದಲು ಅಗ್ನಿಯನ್ನು ಕರೆದು ''ಇದು ಯಾವ ಸತ್ತ್ವವೋ ತಿಳಿದುಕೊಂಡು ಬಾ'' ಎಂದು ಕಳುಹಿಸಿದರು.

ಅಗ್ನಿಯು ಹತ್ತಿರಕ್ಕೆ ಹೋದಮಾತ್ರಕ್ಕೆ ತೇಜೋಹೀನನಾದನು. ಎದುರಿಗಿರುವ ಪರಮೇಶ್ವರನು ''ನೀನು ಯಾರು''ಎನ್ನಲು ''ನಾನು ಅಗ್ನಿ, ಆದದ್ದನ್ನೆಲ್ಲ ತಿಳಿಯುವ ಜಾತವೇದಸನು'' ಎಂದು ಕಷ್ಟದಿಂದ ನುಡಿದನು. ಆಗ ಯಕ್ಷರೂಪನಾದ ಪರಮೇಶ್ವರನು ''ನಿನ್ನಲ್ಲಿರುವ ವೀರ್ಯವು ಏನು ?'' ಎಂದು ಕೇಳಿದನು. ಅಗ್ನಿಯು ''ಲೋಕದಲ್ಲಿ ಯಾವದನ್ನಾದರೂ ಸುಟ್ಟುಹಾಕಬಲ್ಲೆನು'' ಎಂದನು. ''ಹಾಗೋ ! ಎಲ್ಲಿ ನೋಡೋಣ, ಈ ಕಡ್ಡಿಯನ್ನು ಸುಡು'' ಎಂದು ಪರಮೇಶ್ವರನು ಅವನ ಮುಂದೆ ಒಂದು ಹುಲ್ಲುಕಡ್ಡಿಯನ್ನಿಟ್ಟನು. ಅಗ್ನಿಯು ತನ್ನ ಜೋರನ್ನೆಲ್ಲ ಉಪಯೋಗಿಸಿದರೂ ಅವನಿಂದ ಅದನ್ನು ಸುಡುವದಾಗಲಿಲ್ಲ. ಅವನು ನಾಚಿಕೆಯಿಂದ ಹಿಂತಿರುಗಿದನು.

ಆಮೇಲೆ ದೇವತೆಗಳು ವಾಯುವನ್ನು ಕಳುಹಿಸಿದರು. ಅವನಿಗೂ ಅಗ್ನಿಯಂತೆಯೇ ಅಪಮಾನವಾಯಿತು. ಪರಮೇಶ್ವರನು ತನ್ನ ಮುಂದೆ ಇಟ್ಟ ಒಂದು ಹುಲ್ಲುಕಡ್ಡಿಯನ್ನು ಕೂಡ ಅವನು ಹಾರಿಸಲಾರದೆಹೋದನು.

ವಾಯುವು ಹಿಂತಿರುಗಿದ ಮೇಲೆ ದೇವತೆಗಳೊಡೆಯನಾದ ಇಂದ್ರನು ತಾನೇ ಯಕ್ಷಸ್ವರೂಪವನ್ನು ಗೊತ್ತುಪಡಿಸುವೆನೆಂದು ಹೊರಟನು. ಆದರೆ ಈಶ್ವರನು ಅವನಿಗೆ ದರ್ಶನವನ್ನು ಕೂಡ ಕೊಡಲಿಲ್ಲ ; ಯಾರಿಗೂ ಕಾಣದ ಹಾಗೆ ಮರೆಯಾಗಿಬಿಟ್ಟನು !

ಇಂದ್ರನು ಬೆಪ್ಪಾದನು. ''ಇದೇನು ಆಶ್ಚರ್ಯವು ! ಇಲ್ಲಿ ನಮಗೆ ಕಾಣಿಸಿಕೊಂಡು ಅಗ್ನಿವಾಯುಗಳ ಶಕ್ತಿಯನ್ನೂ ಕುಗ್ಗಿಸಿದ ಈ ಮಹಾಮಹಿಮನು ಯಾರು ?'' ಎಂದು ಅವನು ಯೋಚಿಸುತ್ತಿರುವಲ್ಲಿ ಅದೇ ಸ್ಥಳದಲ್ಲಿ ಹೈಮವತಿಯಾದ ಉಮಾದೇವಿಯು ಕಾಣಿಸಿಕೊಂಡಳು. ''ಅಯ್ಯ ದೇವರಾಯನೆ, ಇಲ್ಲಿ ನಿಮ್ಮೆದುರಿಗೆ ಬಂದು ತೋರಿಕೊಂಡ ಅದ್ಭುತ ಆಕಾರವು ಯಾರದು ತಿಳಿಯಿತೆ ? ಇದೇ ಎಲ್ಲರಿಗಿಂತಲೂ ಹೆಚ್ಚಿನ ಪರಮೇಶ್ವರನ ರೂಪವು. ಆ ಪರಮಾತ್ಮನೇ ನಿಮಗೆ ಜಯವನ್ನು ಕೊಟ್ಟದ್ದು. ನೀವು ನಿಜವನ್ನು ತಿಳಿಯದೆ ನಾವೇ ಗೆದ್ದೆವು ಎಂದುಕೊಂಡಿರಿ'' ಎಂದು ಅವನಿಗೆ ತಿಳಿಯ ಹೇಳಿದಳು.

ನಮ್ಮ ಶರೀರದಲ್ಲಿಯೂ ಇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿಯೂ ತೋರಿಕೊಳ್ಳುವ ಶಕ್ತಿಗಳೆಲ್ಲವೂ ಆ ಪರಮೇಶ್ವರನದೇ. ಆತನೇ ನಮ್ಮಗಳ ಆತ್ಮನಾಗಿರುತ್ತಾನೆ. ನಾವು ನಮ್ಮನಮ್ಮ ರೂಪದಿಂದ ಯಾವ ಶಕ್ತಿಯೂ ಉಳ್ಳವರಲ್ಲ, ಎಲ್ಲಾ ಶಕ್ತಿಯೂ ದೇವದೇವನಾದ ಆ ಪರಮೇಶ್ವರನದೇ - ಎಂಬ ಘನತತ್ತ್ವವು ಆಗ ಇಂದ್ರನಿಗೂ ಅವನ ಮೂಲಕ ಮಿಕ್ಕ ದೇವತೆಗಳಿಗೂ ಮನದಟ್ಟಾಯಿತು.

------

## ೧೩. ಪರತತ್ತ್ವವನ್ನು ತಿಳಿಯುವದಕ್ಕೆ ಏಕಾಗ್ರವಿಚಾರವು ಬೇಕು

(ತೈತ್ತಿರೀಯ)

ಒಂದಾನೊಂದು ಕಾಲಕ್ಕೆ ಭೃಗುವೆಂಬಾತನು ತಂದೆಯಾದ ವರುಣನ ಬಳಿಗೆ ಹೋಗಿ ''ಪೂಜ್ಯರೆ, ನನಗೆ ಬ್ರಹ್ಮಸ್ವರೂಪವನ್ನು ಉಪದೇಶಿಸಿರಿ'' ಎಂದು ಪ್ರಾರ್ಥಿಸಿಕೊಂಡನು.

ಆಗ ವರುಣನು ''ಅಪ್ಪ, ಶರೀರ, ಪ್ರಾಣ, ಇಂದ್ರಿಯಗಳು - ಇವುಗಳೇ ಬ್ರಹ್ಮವನ್ನು ತಿಳಿಯುವದಕ್ಕೆ ದ್ವಾರಗಳು. ಯಾವದರಿಂದ ಈ ಭೂತಗಳು ಹುಟ್ಟುವವೋ, ಯಾವದರಿಂದ ಹುಟ್ಟಿ ಬದುಕಿರುವವೋ, ಯಾವದನ್ನು ಹೋಗಿ ಅದರಲ್ಲಿಯೇ ಒಂದಾಗುವವೋ ಅದೇ **ಬ್ರಹ್ಮವು**. ಅದನ್ನು ವಿಚಾರಮಾಡು'' ಎಂದು ಹೇಳಿದನು.

ತಂದೆಯು ಮಾಡಿದ ಉಪದೇಶವನ್ನು ಕೇಳಿದ ಭೃಗುವು **ತಪಸ್ಸು** ಮಾಡಿದನು. ಮನಸ್ಸನ್ನೂ ಇಂದ್ರಿಯಗಳನ್ನೂ ಒಕ್ಕಡೆಗೆ ನಿಲ್ಲಿಸಿ ವಿಚಾರ ಮಾಡುವದೇ ತಪಸ್ಸು. ಭೃಗುವು ಮನಸ್ಸನ್ನು ಅತ್ತಿತ್ತ ಹರಿದಾಡಗೊಡದೆ, ಇಂದ್ರಿಯಗಳನ್ನು ಅತ್ತಿತ್ತ ಚಲಿಸಗೊಳಿಸದೆ ಒಂದೇ ವಿಷಯವನ್ನು ಕುರಿತು ಆಲೋಚನೆಮಾಡಿದನು. ಇದೆಲ್ಲವೂ ಏತರಿಂದ ಉಂಟಾಗುತ್ತದೆ? ಏತರಿಂದ ಹುಟ್ಟಿ ಜೀವಿಸಿರುತ್ತವೆ ? ಕೊನೆಗೆ ಏತರಲ್ಲಿ ಬೆರೆದು ಹೋಗುತ್ತವೆ ?- ಎಂಬಿದರ ಯೋಚನೆಯೊಂದೇ ಅವನಿಗೆ ಹತ್ತಿಕೊಂಡಿತು.

ಶರೀರ, ಪ್ರಾಣ, ಮನಸ್ಸು, ಬುದ್ಧಿ- ಇವುಗಳನ್ನು ಒಂದೊಂದಾಗಿ ಬ್ರಹ್ಮವೆಂದು ಅವನು ಭಾವಿಸಿದನು. ಕೊನೆಗೆ ಇವೆಲ್ಲವನ್ನೂ ನೋಡುತ್ತಿರುವ **ಚೈತನ್ಯರೂಪವೇ** ಬ್ರಹ್ಮವು, ಅದು **ಆನಂದ**ಸ್ವರೂಪವಾಗಿರುತ್ತದೆ- ಎಂಬುದನ್ನು ಅವನು ಮನಗಂಡನು.

------

# III ಉಪನಿಷತ್ತುಗಳಲ್ಲಿ ಹೇಳಿರುವ ಸಿದ್ಧಾಂತ

ಉಪನಿಷತ್ತುಗಳಲ್ಲಿ ಹೇಳಿರುವ ಪರತತ್ತ್ವವು ಯಾವದು ? ಆ ಪರತತ್ತ್ವಕ್ಕೂ ನಮಗೂ ಇರುವ ಸಂಬಂಧವು ಯಾವದು ? ಅದಕ್ಕೂ ಜಗತ್ತಿಗೂ ಯಾವ ಸಂಬಂಧವು ಇರುವದು ?- ಎಂಬೀ ಮೂರು ಪ್ರಶ್ನೆಗಳಿಗೆ ನಾವು ಇಲ್ಲಿ ಸಂಗ್ರಹವಾಗಿ ಉತ್ತರವನ್ನು ಹೇಳುವೆವು :

## ೧. ಬ್ರಹ್ಮದ ಹೆಸರುಗಳು

ಪರತತ್ತ್ವಕ್ಕೆ ಅನೇಕ ಹೆಸರುಗಳನ್ನು ಉಪನಿಷತ್ತಿನಲ್ಲಿ ಕೊಟ್ಟಿರುತ್ತದೆ. **ಬ್ರಹ್ಮ**- ಎಲ್ಲಕ್ಕೂ ಮಿಗಿಲಾದ ಅಳತೆಯಿಲ್ಲದ ಪರಮಾರ್ಥ ; **ಅಕ್ಷರ** - ನಾಶವಿಲ್ಲದ್ದು ; **ಭೂಮ** - ಹೆಚ್ಚಿನ, ಮಿಗಿಲಾದ ತತ್ತ್ವ ; **ಪ್ರಾಣ** - ಎಲ್ಲವೂ ಬದುಕಿರುವದಕ್ಕೆ ಕಾರಣವಾದದ್ದು ; **ಆಕಾಶ** - ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಹೊಳೆಯುತ್ತಿರುವ ನಿತ್ಯವಸ್ತು ; **ಜ್ಯೋತಿ** - ಎಲ್ಲವನ್ನೂ ತಿಳಿಸಿಕೊಡುವ ಬೆಳಕು ; **ದೇವ, ದೇವತಾ** - ಬೆಳಗುವ ಪರಮಾರ್ಥ ; **ಪ್ರಾಜ್ಞ** - ಅರಿವಿನ ತಿರುಳಾಗಿರುವ ತತ್ತ್ವ ; **ಪುರುಷ** - ಪೂರ್ಣವಾಗಿರುವ ವಸ್ತು ; **ಈಶ, ಮಹೇಶ್ವರ** - ಸರ್ವಸ್ವತಂತ್ರವಾಗಿರುವ ತತ್ತ್ವ ; **ಅಂತರ್ಯಾಮಿ** - ಎಲ್ಲದರ ಒಳಗಿದ್ದುಕೊಂಡು ಹಿಡಿತದಲ್ಲಿಟ್ಟುಕೊಂಡಿರುವ ತತ್ತ್ವ ; **ಆತ್ಮ** - ನಮ್ಮಗಳ ನಿಜವಾದ ಸ್ವರೂಪವೇ ಆಗಿರುವ ತತ್ತ್ವ ; **ಸತ್ತು** - ನಿಜವಾಗಿರತಕ್ಕದ್ದು.

## ೨. ಬ್ರಹ್ಮದ ಎರಡು ರೂಪಗಳು

ಬ್ರಹ್ಮಕ್ಕೆ ಎರಡು ರೂಪಗಳುಂಟು. ಒಂದು ಎಲ್ಲಕ್ಕೂ ಹೆಚ್ಚಿನ ರೂಪ. ಅದಕ್ಕೆ **ಪರಬ್ರಹ್ಮ**ವೆಂದು ಹೆಸರು. ಅದನ್ನು ಅರಿತುಕೊಳ್ಳಬೇಕಾಗಿರುತ್ತದೆ. ಇನ್ನೊಂದು ಅದಕ್ಕಿಂತ ಸ್ವಲ್ಪ ಕಡಿಮೆಯ ರೂಪ. ಇದಕ್ಕೆ **ಅಪರಬ್ರಹ್ಮ**ವೆಂದು ಹೆಸರು. ಅದನ್ನು ಉಪಾಸನೆಮಾಡಬೇಕಾಗಿರುತ್ತದೆ.

## ೩. ಪರಬ್ರಹ್ಮದ ಸ್ವರೂಪ

(1) ಯಾವದರಿಂದ ಎಲ್ಲವೂ ಹುಟ್ಟಿದೆಯೋ, ಯಾವದರಲ್ಲಿಯೇ ಇದ್ದುಕೊಂಡಿದೆಯೋ, ಯಾವದರಲ್ಲಿ ಸೇರಿ ಒಂದಾಗುವದೋ ಅದು ಬ್ರಹ್ಮವು. (ತೈತ್ತಿರೀಯ)

(2) ಜಗತ್ತಿನ ಇರವು, ಅರಿವು, ಸುಖ - ಇವುಗಳೆಲ್ಲಕ್ಕೂ ತಿರುಳಾಗಿರುತ್ತದೆ. ಅದು ಸತ್ಯಜ್ಞಾನಾನಂತಸ್ವರೂಪವಾಗಿರುತ್ತದೆ. (ತೈತ್ತಿರೀಯ)

(3) ಅದು ಕಾಣತಕ್ಕದ್ದಲ್ಲ, ಹಿಡಿದುಕೊಳ್ಳುವದಕ್ಕೆ ಬರುವದಲ್ಲ, ಅದಕ್ಕೆ ಮೂಲವಿರುವದಿಲ್ಲ, ಬಣ್ಣವಿರುವದಿಲ್ಲ, ಇಂದ್ರಿಯಗಳಿರುವದಿಲ್ಲ ; ನಿತ್ಯವಾದದ್ದು, ವ್ಯಾಪಕವಾದದ್ದು, ಎಲ್ಲೆಲ್ಲಿಯೂ ಇರುವಂಥದ್ದು, ಬಹುಸೂಕ್ಷ್ಮವಾದದ್ದು, ಸವೆಯುವದಲ್ಲ, ಎಲ್ಲಕ್ಕೂ ಕಾರಣವಾಗಿದೆ. (ಮುಂಡಕ)

(4) ಅದನ್ನು ಮಾತಿನಿಂದ ಹೇಳುವದಕ್ಕಾಗಲಿ ಮನಸ್ಸಿನಿಂದ ವಿಷಯವಾಗಿ ಮಾಡುವದಕ್ಕಾಗಲಿ ಆಗುವ ಹಾಗಿಲ್ಲ. (ತೈತ್ತಿರೀಯ)

ವಾಕ್ಕು, ಮನಸ್ಸು, ಇಂದ್ರಿಯಗಳು - ಎಲ್ಲವನ್ನೂ ಅದೇ ವಿಷಯವಾಗಿ ಮಾಡಿಕೊಂಡು ಬೆಳಗುತ್ತಿದೆ ; ಅದನ್ನು ಅವು ಯಾವವೂ ಅರಿಯಲಾರವು. (ಕೇನ)

(5) ಬೆಂಕಿ, ಗಾಳಿ - ಇವು ಲೋಕದಲ್ಲೆಲ್ಲ ಸೇರಿಕೊಂಡು ಯಾವದರೊಳಗೆ ಇರುವವೋ ಅವುಗಳ ರೂಪವನ್ನು ಹೊಂದಿರುವಂತೆ ಹೇಗೆ ಕಾಣುವವೋ ಅದರಂತೆ ಸಮಸ್ತಪ್ರಾಣಿಗಳಲ್ಲಿಯೂ ಬ್ರಹ್ಮವೊಂದೇ ಒಳಗಿನ ಆತ್ಮನಾಗಿ ಇರುವದು, ಬೇರೆಬೇರೆಯ ರೂಪವನ್ನು ತಳೆದಿರುವಂತೆ ತೋರುವದು. (ಕಠ)

(6) ಒಂದೇ ಚೈತನ್ಯರೂಪವಾದ ಬೆಳಕು ಸಮಸ್ತಪ್ರಾಣಿಗಳಲ್ಲಿಯೂ ಇರುವದು. ಅವುಗಳಲ್ಲಿ ಆಗುವ ಕರ್ಮಗಳಿಗೆಲ್ಲ ಮೂಲವಾಗಿರುವದು, ಆದರೆ ಯಾವದೊಂದರ ಸೋಂಕೂ ಇಲ್ಲದೆ ಎಲ್ಲಕ್ಕೂ ಸಾಕ್ಷಿಯಾಗಿ, ಬರಿಯ ಅರಿವಾಗಿ, ಯಾವದೊಂದು ಧರ್ಮವೂ ಇಲ್ಲದೆ ಇರುವದು. (ಶ್ವೇತಾಶ್ವತರ)

(7) ನಿಜವಾಗಿ ಬ್ರಹ್ಮವು ಕೆಳಗೂ ಮೇಲೂ ಹಿಂದೂ ಮುಂದೂ ಎಡಕ್ಕೂ ಬಲಕ್ಕೂ ಎಲ್ಲೆಲ್ಲಿಯೂ ಇರುವದು. ಎಲ್ಲವೂ ಬ್ರಹ್ಮವೇ. (ಮುಂಡಕ, ಛಾಂದೋಗ್ಯ)

## ೪. ಜೀವರುಗಳಿಗೂ ಪರಬ್ರಹ್ಮಕ್ಕೂ ಸಂಬಂಧವೇನು ?

(1) ಬೆಂಕಿಯಿಂದ ಹೊತ್ತಿಕೊಂಡುರಿಯುವ ಅದೇ ರೂಪವಾದ ಕಿಡಿಗಳು ಸಾವಿರಾರು ಹೇಗೆ ಹೊರಕ್ಕೆ ಹಾರಿಬರುವವೋ ಹಾಗೆಯೇ ನಾಶರಹಿತವಾದ ಬ್ರಹ್ಮದಿಂದ ಜೀವರುಗಳು ಹುಟ್ಟಿ ಅದರಲ್ಲಿಯೇ ಸೇರುತ್ತಿರುವರು. (ಮುಂಡಕ, ಬೃಹದಾರಣ್ಯಕ)

(2) ಇರವಿನ ರೂಪವಾದ (ಸತ್) ಬ್ರಹ್ಮದಿಂದಲೇ, ಎಲ್ಲಾ ಜೀವರೂ ಹುಟ್ಟಿರುತ್ತಾರೆ, ಅದರಲ್ಲಿಯೇ ಇರುತ್ತಾರೆ, ಅದನ್ನೇ ಸೇರುತ್ತಾರೆ. ............ ಅದೇ ಸತ್ಯವಾದದ್ದು, ಅದೇ ಆತ್ಮನು, ಅದು ನೀನು. (ಛಾಂದೋಗ್ಯ)

(3) ಜೀವನು ಪ್ರತಿದಿನವೂ ಬರಿನಿದ್ರೆಯಲ್ಲಿ ಬ್ರಹ್ಮದಲ್ಲಿಯೇ ಬೆರೆತು ಹೋಗುತ್ತಾನೆ. ಅದರಿಂದಲೇ ಎಚ್ಚರದಲ್ಲಿ ಮತ್ತೆ ಹೊರಕ್ಕೆ ಬರುತ್ತಾನೆ (ಛಾಂದೋಗ್ಯ, ಬೃಹದಾರಣ್ಯಕ, ಪ್ರಶ್ನ, ಕೌಷೀತಕಿ, ಮಾಂಡೂಕ್ಯ). ಮರಣದಲ್ಲಿಯೂ ಹೀಗೆಯೇ ಬ್ರಹ್ಮದಲ್ಲಿ ಸೇರು

ತ್ತಾನೆ, ಜ್ಞಾನದಿಂದ ಇದನ್ನರಿತುಕೊಂಡು ಅದರಲ್ಲಿಯೇ ಸೇರಿ ಹೋಗುತ್ತಾನೆ. (ಛಾಂದೋಗ್ಯ, ಬೃಹದಾರಣ್ಯಕ)

(4) ದೇವತೆಗಳು, ಋಷಿಗಳು, ಮನುಷ್ಯರು - ಎಲ್ಲರೂ ಬ್ರಹ್ಮವೇ. ಯಾರುಯಾರು ನಾನು ಬ್ರಹ್ಮವು ಎಂಬುದನ್ನು ಅರಿತುಕೊಂಡರೋ ಅವರೆಲ್ಲರೂ ಸರ್ವವೂ ಆಗಿಬಿಟ್ಟಿರುತ್ತಾರೆ. ಈಗಲೂ ಯಾರು ಹಾಗೆಂದು ಅರಿತುಕೊಳ್ಳುವರೋ ಅವರೂ ಸರ್ವಾತ್ಮತ್ವವನ್ನು ಪಡೆದುಕೊಳ್ಳುತ್ತಾರೆ. (ಬೃಹದಾರಣ್ಯಕ)

## ೫. ಪರಬ್ರಹ್ಮಕ್ಕೂ ಜಗತ್ತಿಗೂ ಸಂಬಂಧವೇನು ?

(1) ಜೇಡರಹುಳು ಹೇಗೆ ನೂಲನ್ನು ತನ್ನಿಂದಲೇ ಹೊರಕ್ಕೆ ಕೆಡವಿ ತನ್ನೊಳಗೇ ಮತ್ತೆ ಸೇರಿಸಿಕೊಳ್ಳುವದೋ, ಭೂಮಿಯಲ್ಲಿ ಮರಗಿಡಗಳು ಹೇಗೆ ಉಂಟಾಗುವವೋ, ಮನುಷ್ಯನ ದೇಹದಿಂದ ತಲೆಗೂದಲೂ ಮೈಗೂದಲೂ ಹೇಗೆ ಬೆಳೆಯುವವೋ, ಹಾಗೆಯೇ ಅಕ್ಷರವಾದ ಬ್ರಹ್ಮದಿಂದ ವಿಶ್ವವು ಉಂಟಾಗುತ್ತದೆ. (ಮುಂಡಕ)

(2) ಈ ವಿಶ್ವವೆಲ್ಲವೂ ಬ್ರಹ್ಮವೇ ಇದೆಲ್ಲವೂ ಬ್ರಹ್ಮವೇ ಸರಿ. (ಛಾಂದೋಗ್ಯ)

------

# IV ಉಪನಿಷತ್ತುಗಳಲ್ಲಿ ಹೇಳಿರುವ ಕೆಲವು ಸಾಧನಗಳು

ಸತ್ಯವೂ ಜ್ಞಾನಸ್ವರೂಪವೂ ಆನಂದಸ್ವರೂಪವೂ ಆಗಿರುವ ಬ್ರಹ್ಮವನ್ನೇ ನಾವು ಈಶ್ವರನೆಂದು ಉಪಾಸನೆಮಾಡುವದು. ಉಪಾಸನೆಮಾಡುವದು ಅಥವಾ **ಧ್ಯಾನಮಾಡುವದು ಎಂದರೆ** ಯಾವಾಗಲೂ ಬ್ರಹ್ಮದ ಸ್ವರೂಪವನ್ನೇ ಎಡೆಬಿಡದೆ ಚಿಂತಿಸುತ್ತಿರುವದು. ಹೀಗೆ ಚಿಂತನೆಮಾಡುವ ಬ್ರಹ್ಮಕ್ಕೆ 'ಅಪರ ಬ್ರಹ್ಮ' ಎಂದು ಹೆಸರು. 'ಅಪರ' ಎಂದರೆ ಕೀಳು ಎಂದು ಅರ್ಥವಾದರೂ ಬ್ರಹ್ಮವು ಕೀಳುಪದಾರ್ಥವೆಂದು ತಿಳಿಯಬಾರದು. ಹಿಂದೆ ನಾವು ಹೇಳಿರುವ ಪರಬ್ರಹ್ಮವು ಧ್ಯಾನಕ್ಕೆ ದಕ್ಕುವದಲ್ಲ ; ಧ್ಯಾನಕ್ಕೆ ಮಿೀರಿರುವದರಿಂದ ಅದನ್ನು ಪರಬ್ರಹ್ಮ - ಹೆಚ್ಚಿನ, ಮನಸ್ಸನ್ನು ಮಿೀರಿರುವ ಬ್ರಹ್ಮ ಎಂದು ಕರೆಯುತ್ತಾರೆ. ಈಗ ನಾವು ಉಪಾಸನೆಮಾಡಬೇಕೆಂದು ಹೇಳಿರುವ ಅಪರಬ್ರಹ್ಮವೂ ಎಲ್ಲಕ್ಕಿಂತಲೂ ಹೆಚ್ಚಿನದೇ : ಆದ್ದರಿಂದ ಈ ಅರ್ಥದಲ್ಲಿ ಅದೂ ಪರಬ್ರಹ್ಮವೇ ಆಗಿರುತ್ತದೆ.

## ೧. ಬ್ರಹ್ಮವನ್ನು ಹೇಗೆ ಉಪಾಸನೆಮಾಡಬೇಕು ?

(1) ಇದೆಲ್ಲವೂ ಬ್ರಹ್ಮವೇ ; ಎಲ್ಲವೂ ಅದರಿಂದಲೇ ಹುಟ್ಟಿ ಅದರಲ್ಲಿಯೇ ಜೀವಿಸಿದ್ದು ಅದನ್ನೇ ಸೇರಿಕೊಳ್ಳುತ್ತದೆ. ಆದ್ದರಿಂದ ಶಾಂತನಾಗಿ ಉಪಾಸನೆಮಾಡಬೇಕು. ಪುರುಷನು ಧ್ಯಾನಮಯನಾಗಿರುತ್ತಾನೆ. ಅವನು ಹೇಗೆ ಧ್ಯಾನಮಾಡುತ್ತಾನೋ ಅದರಂತೆಯೇ ಅವನಿಗೆ ಸತ್ತಬಳಿಕವೂ ಫಲವಾಗುತ್ತದೆ. ಆದ್ದರಿಂದ ಮನೋಮಯನಾಗಿ ಪ್ರಾಣಶರೀರನಾಗಿ ಪ್ರಕಾಶ ರೂಪನಾಗಿರುತ್ತಾನೆಂದೂ ಸತ್ಯಸಂಕಲ್ಪನೆಂದೂ ಆಕಾಶದಂತೆ ಸೂಕ್ಷ್ಮನಾಗಿ ಎಲ್ಲೆಲ್ಲಿಯೂ ಇರುವನೆಂದೂ ಸರ್ವಕರ್ಮನೂ ಸರ್ವಕಾಮನೂ ಸರ್ವ ಗಂಧವುಳ್ಳವನೂ ಸರ್ವರಸವುಳ್ಳವನೂ ಎಲ್ಲವನ್ನೂ ವ್ಯಾಪಿಸಿರುವವನೂ

ಆಗಿರುವವನೆಂದೂ ಯಾವ ಕರಣಗಳೂ ಇಲ್ಲದವನೆಂದೂ ನಿತ್ಯತೃಪ್ತನೆಂದೂ ಧ್ಯಾನಿಸಬೇಕು. 'ಇವನು ನನ್ನ ಆತ್ಮನಾಗಿ ಹೃದಯದೊಳಗೆ ಇರುತ್ತಾನೆ; ಬತ್ತದ ಕಾಳು, ಜವೆಗೋಧಿಯಕಾಳು, ಸಾಸಿವೆಯಕಾಳು, ಸಾವೆಯಕಾಳು ಅಥವಾ ಸಾವೆಯಕ್ಕಿಯಕಾಳು - ಇವೆಲ್ಲಕ್ಕಿಂತಲೂ ಅತಿಸೂಕ್ಷ್ಮನಾಗಿ, ಭೂಮಿಗಿಂತ ದೊಡ್ಡವನಾಗಿ ಅಂತರಿಕ್ಷಕ್ಕಿಂತಲೂ ದೊಡ್ಡವನಾಗಿ ಸ್ವರ್ಗಕ್ಕಿಂತಲೂ ದೊಡ್ಡವನಾಗಿ ಎಲ್ಲಾ ಲೋಕಗಳಿಗಿಂತಲೂ ದೊಡ್ಡವನಾಗಿರುತ್ತಾನೆ'' ಎಂದೂ ಉಪಾಸನೆಮಾಡಬೇಕು. ಇವನೇ ನನ್ನ ಆತ್ಮನು. ಇವನನ್ನೇ ಸತ್ತ ಬಳಿಕ ನಾನು ಸೇರುವೆನು- ಎಂದು ನಿಸ್ಸಂಶಯವಾಗಿ ನಂಬಬೇಕು. ಹೀಗೆ ಉಪಾಸನೆ ಮಾಡಿದರೆ ಪರಮೇಶ್ವರನಲ್ಲಿಯೇ ಸೇರಿಹೋಗುತ್ತಾನೆ - ಎಂದು **ಶಾಂಡಿಲ್ಯನು** ಹೇಳಿರುತ್ತಾನೆ. (ಛಾಂದೋಗ್ಯ)

ಮೇಲೆ ಹೇಳಿರುವದು ಉತ್ತಮವಾದ ಉಪಾಸನೆಯು. ಇದೇ ಬಗೆಯ ಮತ್ತೆ ಕೆಲವು ಉಪಾಸನೆಗಳನ್ನು ಉಪನಿಷತ್ತಿನಲ್ಲಿ ಹೇಳಿರುತ್ತದೆ. ಅವುಗಳಲ್ಲಿ ಬ್ರಹ್ಮಕ್ಕೆ ಗುಣಗಳನ್ನೇ ಅಲ್ಲದೆ ಆಕಾರವನ್ನೂ ಹೇಳಿರುತ್ತದೆ. ಉದಾಹರಣೆಗೆ.

(2) ಸೂರ್ಯಮಂಡಲದಲ್ಲಿಯೂ ಮನುಷ್ಯನ ಕಣ್ಣಿನಲ್ಲಿಯೂ ಜ್ಯೋತಿರ್ಮಯನಾದ ಪುರುಷನನ್ನು ಉಪಾಸನೆಮಾಡಬೇಕೆಂದು ಹೇಳಿರುತ್ತದೆ. (ಛಾಂದೋಗ್ಯ).

(3) ಆಕಾಶ, ಮನಸ್ಸು, ನಾಮ (ಹೆಸರು) - ಮುಂತಾದ ವ್ಯಾಪಕ ವಸ್ತುಗಳನ್ನು ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಕೂಡ ಉಪನಿಷತ್ತುಗಳಲ್ಲಿ ಹೇಳಿರುತ್ತದೆ. (ಛಾಂದೋಗ್ಯ). ಎಲ್ಲವೂ ಬ್ರಹ್ಮದಿಂದಲೇ ಉಂಟಾಗಿರುವದರಿಂದ ಪರಮಾರ್ಥವಾಗಿ ಬ್ರಹ್ಮವೇ ಆಗಿರುತ್ತದೆ. ಆದ್ದರಿಂದ ನಮಗೆ ಯಾವದು ಹೆಚ್ಚಿನ ವಸ್ತುವೆಂದು ತೋರುತ್ತದೆಯೋ ಅದನ್ನು ಬ್ರಹ್ಮವೆಂದು ಭಾವಿಸುವದೇನೂ ತಪ್ಪಲ್ಲ. ಆಯಾ ಪದಾರ್ಥವು ತೋರುವ ರೀತಿಯಿಂದಲೇ ಅದು ಬ್ರಹ್ಮವಲ್ಲವಾದರೂ ಶಾಸ್ತ್ರದಲ್ಲಿ ಹೇಳಿರುವ ಬ್ರಹ್ಮಗುಣವನ್ನು ಆ ಮೂಲಕ ಧ್ಯಾನಿಸಿದರೆ ಉತ್ತಮಫಲವೇ ಆಗುತ್ತದೆ. ಹುಡುಗರಿಗೆ ಸಂಖ್ಯಾ

ಜ್ಞಾನವನ್ನು ಗೋಲಿಗಜ್ಜುಗಗಳ ಮೂಲಕ ಮಾಡಿಕೊಡುವ ರೀತಿಗೆ ಇದನ್ನು ಹೋಲಿಸಬಹುದಾಗುತ್ತದೆ. ಈ ಬಗೆಯ ಉಪಾಸನೆಗಳಿಗೆ **ಪ್ರತೀಕೋಪಾಸನೆ**ಯೆಂದು ಹೆಸರು.

ಉಪಾಸನೆಗಳನ್ನು ಗುರುಮುಖದಿಂದಲೇ ತಿಳಿದುಕೊಳ್ಳಬೇಕಾಗಿರುವದರಿಂದಲೂ ಅವುಗಳನ್ನು ಅಭ್ಯಾಸಮಾಡದೆ ಸುಮ್ಮನೆ ಅವುಗಳ ವಿಷಯವಾಗಿ ಓದುವದರಿಂದ ಯಾವ ಹೆಚ್ಚಿನ ಪ್ರಯೋಜನವೂ ಇಲ್ಲದ್ದರಿಂದಲೂ ಇಲ್ಲಿಗೆ ಈ ವಿಷಯವನ್ನು ನಿಲ್ಲಿಸುತ್ತೇವೆ.

## ೨. ಬ್ರಹ್ಮಜ್ಞಾನಕ್ಕೆ ಬೇಕಾದ ಸಾಧನಗಳು

ಇವುಗಳಲ್ಲಿ ಎರಡು ಬಗೆ. ಕೆಲವು ಮನಸ್ಸಿನಲ್ಲಿಯೇ ಅನುಸರಿಸಬೇಕಾದ ಸಾಧನಗಳು. ಇವುಗಳನ್ನು ಅಂತರಂಗ (ಒಳಗಿನ) ಸಾಧನಗಳು ಎನ್ನುತ್ತಾರೆ. **ಶಮ** (ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವದು), **ದಮ** (ಇಂದ್ರಿಯನಿಗ್ರಹ) **ಉಪರತಿ**(ಹೊರಗಿನ ವ್ಯಾಪಾರವನ್ನು ಬಿಟ್ಟು ತನ್ನೊಳಗೇ ತಾನು ನಿಲ್ಲುವದು), **ತಿತಿಕ್ಷೆ** (ಶೀತೋಷ್ಣವೇ ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವದು), **ಶ್ರದ್ಧೆ** (ಗುರುಶಾಸ್ತ್ರವಚನಗಳಲ್ಲಿ ನಂಬಿಕೆಯಿರುವದು), **ಸಮಾಧಾನ** (ಮನಸ್ಸನ್ನು ಏರುಪೇರಿಲ್ಲದೆ ಇಟ್ಟುಕೊಳ್ಳುವದು) - ಇವುಗಳಿಂದ ತನ್ನೊಳಗೇ ಆತ್ಮಸ್ವರೂಪವನ್ನು ನೋಡಿಕೊಳ್ಳಬೇಕು. ಆ ಆತ್ಮನೇ ಸರ್ವವೂ ಆಗಿರುವನೆಂದು ಅದರಿಂದ ತಿಳಿಯಬರುತ್ತದೆ. (ಬೃಹದಾರಣ್ಯಕ)

ಆಹಾರಶುದ್ಧಿಯಾದರೆ ಅಂತಃಕರಣವು ಶುದ್ಧವಾಗುತ್ತದೆ ಅಂತಃಕರಣವು ಶುದ್ಧವಾದರೆ ಆತ್ಮನ ಸ್ಮರಣೆಯು ಬರುತ್ತದೆ (ಛಾಂದೋಗ್ಯ) ಆದ್ದರಿಂದ ಸಾತ್ತ್ವಿಕವಾದ ಆಹಾರವನ್ನು ತಿನ್ನಬೇಕು. ಬ್ರಹ್ಮಚರ್ಯದಿಂದ ವಿಷಯದ ಮೋಹವು ಹೋಗುತ್ತದೆ, ಆತ್ಮನನ್ನು ತಿಳಿಯುವ ಒಳಗಣ್ಣು ತೆರೆದುಕೊಳ್ಳುತ್ತದೆ. ಆದ್ದರಿಂದ ಬ್ರಹ್ಮಚರ್ಯವನ್ನು ಅನುಸರಿಸಬೇಕು. (ಛಾಂದೋಗ್ಯ).

ಇದರಂತೆ ಶಾಸ್ತ್ರವನ್ನು ಅಧ್ಯಯನಮಾಡಿದರೆ ತಪ್ಪುತಿಳಿವಳಿಕೆಯನ್ನು ಕಳೆಯಬಹುದು ; ಆದ್ದರಿಂದ ವೇದವನ್ನು ಅಧ್ಯಯನಮಾಡಬೇಕು, ಮಾಡಿಸಬೇಕು. (ತೈತ್ತಿರೀಯ). ವೇದದಲ್ಲಿ ಹೇಳಿರುವಂತೆ ಕರ್ಮಗಳನ್ನು ಮಾಡುವದರಿಂದ ಶರೀರದ ಅಭಿಮಾನವು ಕಡಿಮೆಯಾಗುತ್ತದೆ ; ಪರಲೋಕದ ಕಡೆಗೆ ಚಿತ್ತವು ಹರಿಯುತ್ತದೆ. ಆದ್ದರಿಂದ ಕರ್ಮಗಳನ್ನು ಮಾಡಬೇಕು, ಇವೆಲ್ಲ ಬಹಿಃಸಾಧನಗಳು, ಎಂದರೆ ಹೊರಗಿನ ಆಚರಣೆಗಳು.

ವೇದವನ್ನು ಹೇಳಿಕೊಟ್ಟಮೇಲೆ ಗುರುಗಳು ಶಿಷ್ಯನಿಗೆ ಹೀಗೆ ಉಪದೇಶ ಮಾಡಬೇಕೆಂದು ಉಪನಿಷತ್ತಿನಲ್ಲಿ ಕಟ್ಟಪ್ಪಣೆಯಿದೆ : ''ಸತ್ಯವನ್ನು ಹೇಳು, ಧರ್ಮವನ್ನು ಮಾಡು, ಅಧ್ಯಯನವನ್ನು ಮರೆಯದಿರು. ಗುರುಗಳಿಗೆ ಬೇಕಾದ ಧನವನ್ನು ಕೊಟ್ಟು ಸಂತತಿಯು ಬೆಳೆಯುವ ಮಾರ್ಗವನ್ನು ತಪ್ಪದೆಮಾಡು, ನಿಜವನ್ನು ಬಿಟ್ಟು ಕದಲಬಾರದು, ಧರ್ಮವನ್ನು ಬಿಟ್ಟು ಕದಲಬಾರದು, ಮಂಗಲಕಾರ್ಯವನ್ನು ಬಿಟ್ಟು ಕದಲಬಾರದು, ಅಭಿವೃದ್ಧಿಯಾಗುವ ಕೆಲಸದಿಂದ ಕದಲಬಾರದು. ಅಧ್ಯಯನಮಾಡುವದು ಮತ್ತೊಬ್ಬರಿಗೆ ಹೇಳುಕೊಡುವದು - ಇವುಗಳನ್ನು ಬಿಟ್ಟು ಕದಲಬಾರದು. ದೇವಕಾರ್ಯವನ್ನೂ ಪಿತೃಕಾರ್ಯವನ್ನೂ ಬಿಟ್ಟು ಕದಲಬಾರದು. ತಾಯಿಯನ್ನು ದೇವರೆಂದು ಭಾವಿಸಬೇಕು ; ತಂದೆಯನ್ನು ದೇವರೆಂದು ಭಾವಿಸಬೇಕು ; ಅತಿಥಿಗಳನ್ನು ದೇವರೆಂದು ಭಾವಿಸಬೇಕು. ನಿರ್ದುಷ್ಟವಾದ ಕರ್ಮಗಳನ್ನು ಮಾಡಬೇಕು, ಉಳಿದವುಗಳನ್ನು ಮಾಡಬಾರದು. ನಮ್ಮ ಒಳ್ಳೆಯ ನಡತೆಯನ್ನೇ ಅನುಸರಿಸಬೇಕು, ಒಳ್ಳೆಯವಲ್ಲದ್ದನ್ನು ಅನುಸರಿಸಬಾರದು. ನಮಗಿಂತಲೂ ಉತ್ತಮರಾದ ಬ್ರಾಹ್ಮಣರನ್ನು ಆಸನದಲ್ಲಿ ಕುಳ್ಳಿರಿಸಿ ಆದರಿಸಬೇಕು. ಶ್ರದ್ಧೆಯಿಂದ ದಾನಮಾಡಬೇಕು, ಅಶ್ರದ್ಧೆಯಿಂದ ಮಾಡಬಾರದು. ಸಂಪತ್ತಿಗೆ ತಕ್ಕಂತೆ ಧಾರಾಳವಾಗಿ ಕೊಡಬೇಕು, ಲಜ್ಜೆಯಿಂದ ಕೊಡಬೇಕು, ಅಂಜಿಕೆಯಿಂದ ಕೊಡಬೇಕು. ನಮ್ಮವರೆಂದು ಕೊಡಬೇಕು. ಇನ್ನು ಮಾಡಬೇಕಾದ ಕೆಲಸದ ವಿಷಯಕ್ಕಾಗಲಿ ನಡತೆಯ ವಿಷಯಕ್ಕಾಗಲಿ

ನಿನಗೆ ಸಂಶಯವಾದರೆ ವಿವೇಕಿಗಳೂ ಕರ್ಮತತ್ಪರರೂ ಆಗಿ ಮತ್ತೊಬ್ಬರಿಂದ ಪ್ರೇರಿತರಾಗದೆ ಕಠಿಣಚಿತ್ತರಲ್ಲದೆ ಧರ್ಮವನ್ನೇ ಬಯಸುವ ಬ್ರಾಹ್ಮಣರು ಯಾರುಅಲ್ಲಿರುತ್ತಾರೋ ಅವರು ಆ ವಿಷಯಕ್ಕೆ ಹೇಗೆ ನಡೆದುಕೊಳ್ಳುವರೋ ನೀನೂ ಹಾಗೆಯೇ ನಡೆದುಕೊ. ಇನ್ನು ದೋಷಯುಕ್ತರೆಂದು ಗಣಿಸಲ್ಪಟ್ಟವರ ವಿಷಯದಲ್ಲಿ ವಿವೇಕಿಗಳೂ ಕರ್ಮತತ್ಪರರೂ ಮತ್ತೊಬ್ಬರಿಂದ ಪ್ರೇರಿತರಾಗದೆ ಕಠಿಣಚಿತ್ತರಲ್ಲದೆ ಧರ್ಮವನ್ನೇ ಬಯಸುವ ಸ್ವಭಾವದವರೂ ಆದ ಬ್ರಾಹ್ಮಣರು ಯಾರು ಅಲ್ಲಿರುತ್ತಾರೋ ಅವರು ಅಂಥವರ ವಿಷಯಕ್ಕೆ ಹೇಗೆ ನಡೆದುಕೊಳ್ಳುವರೋ ನೀನೂ ಹಾಗೆಯೇ ನಡೆದುಕೊ. ಇದೇ ಅಪ್ಪಣೆಯು, ಇದೇ ಉಪದೇಶವು, ಇದೇ ವೇದದ ರಹಸ್ಯವು, ಇದು ಕಟ್ಟಪ್ಪಣೆಯು - ಹೀಗೆ ಮಾಡುತ್ತಿರಬೇಕು. ಹೀಗೆಯೇ ಮಾಡುತ್ತಿರಬೇಕು.'' (ತೈತ್ತಿರೀಯ)

ಶಾಸ್ತ್ರದಲ್ಲಿ ಬೇಡವೆಂದದ್ದನ್ನು ಬಿಟ್ಟು ಮಾಡೆಂದದ್ದನ್ನು ಮಾಡುತ್ತಾ ಯಾರು ಒಳ್ಳೆಯ ನಡತೆಯವರಾಗಿರುವರೋ ಅವರೇ ಜ್ಞಾನಕ್ಕೆ ತಕ್ಕ ಅಧಿಕಾರಿಗಳು. ಇದೇ ಸಾಧನದ ಸರ್ವಸ್ವವು.

------

# V ಉಪನಿಷತ್ತುಗಳಲ್ಲಿರುವ ದೃಷ್ಟಾಂತಗಳು

ಉಪನಿಷತ್ತುಗಳಲ್ಲಿ ದೃಷ್ಟಾಂತಗಳಿಂದ ತತ್ತ್ವವನ್ನುಪದೇಶಿಸುವ ಒಂದು ವಿಶೇಷಕ್ರಮವಿದೆ. ವಿಷಯವನ್ನು ಯಾವದಾದರೊಂದು ಕಥಾಸಂದರ್ಭ ದಲ್ಲಿಟ್ಟು ಸಂಭಾಷಣೆಯ ರೂಪದಲ್ಲಿ ತಿಳಿಸಿರುವದರಿಂದ ಅದು ಬೇಗನೆ ಮನಸ್ಸಿಗೆ ಹಿಡಿಯುತ್ತದೆ. ಅದರಂತೆ ದೃಷ್ಟಾಂತಗಳಿಂದ ವಿಷಯವನ್ನು ತಿಳಿಸಿದರೆ ಸ್ಪಷ್ಟವಾಗಿ ಅದು ಮನಸ್ಸಿಗೆ ಗೋಚರವಾಗುತ್ತದೆ. ಈಗ ನಾವು ಕೆಲವು ಇಂಥ ದೃಷ್ಟಾಂತಗಳನ್ನು ಇಲ್ಲಿ ಉದಾಹರಿಸುವೆವು.

## ೧. ಬೆಂಕಿ, ಉಸಿರು

### (ಬೃಹದಾರಣ್ಯಕ)

ಪರಮಾತ್ಮನೊಬ್ಬನೇ ನಿಜವಾಗಿರತಕ್ಕವನು. ಮಿಕ್ಕದ್ದೆಲ್ಲವೂ ಅವ ನಿಂದಲೇ ಬಂದಿರುತ್ತದೆ. ಪರಮಾತ್ಮನಿಂದ ಸೃಷ್ಟಿಯಾಗುತ್ತಿರುವ ಜಗತ್ತು ಶಬ್ದ ಗಳೆಂದೂ ವಸ್ತುಗಳೆಂದೂ ಎರಡು ಬಗೆಯಾಗಿದೆ. ಈ ಜಗತ್ತನ್ನು ಸೃಷ್ಟಿಸುವದಕ್ಕೆ ಪರಮಾತ್ಮನಿಗೆ ಯಾವ ಆಲೋಚನೆಯೂ ಬೇಕಿಲ್ಲ, ಯಾವ ಆಯಾಸವೂ ಆಗುವಹಾಗಿಲ್ಲ. ಈ ವಿಷಯವನ್ನು ತಿಳಿಸುವದಕ್ಕೆ ಯಾಜ್ಞವಲ್ಕ್ಯರು ಹೊಗೆಯ ಮತ್ತು ಉಸಿರಿನ ದೃಷ್ಟಾಂತವನ್ನುಪಯೋಗಿಸಿ ರುತ್ತಾರೆ.

''ಎಲೆ ಮೈತ್ರೇಯಿ, ಹಸಿಯ ಕಟ್ಟಿಗೆಯ ಬೆಂಕಿಯನ್ನಿಟ್ಟುಕೊಂಡರೆ ಅದರಿಂದ ಹೇಗೆ ಬಗೆಬಗೆಯ ಹೊಗೆಗಳು ಎದ್ದೆದ್ದು ಬರುವವೋ ಅದರಂತೆಯೇ ಈ ಮಹಾಪರವಸ್ತುವಿನ ಉಸಿರು ಇದೆಲ್ಲವೂ ಆಗಿರುತ್ತದೆ ; ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಇತಿಹಾಸ, ಪುರಾಣ, ಬೇರೆಬೇರೆ ವಿದ್ಯೆಗಳು, ಉಪಾಸನಾವಾಕ್ಯಗಳು, ಶ್ಲೋಕಗಳು, ಸೂತ್ರಗಳು, ವ್ಯಾಖ್ಯಾನಗಳು, ಅನುವ್ಯಾಖ್ಯಾನಗಳು, ಯಾಗ, ಹೋಮ, ತಿನ್ನುವದು, ಕುಡಿಯುವದು, ಈ ಲೋಕ, ಪರಲೋಕ, ಪ್ರಾಣಿಗಳು - ಎಲ್ಲವೂ ಇದರ ಉಸಿರುಗಳೇ.''

ಈ ದೃಷ್ಟಾಂತದಲ್ಲಿ ಶಬ್ದಪ್ರಪಂಚವನ್ನೂ ವಸ್ತುಪ್ರಪಂಚವನ್ನೂ ಸೃಷ್ಟಿ ಮಾಡುವಾಗ ಪರಮಾತ್ಮನು ಒಬ್ಬನೇ ಇರುತ್ತಾನೆ. ಹಸಿಯ ಕಟ್ಟಿಗೆಯಲ್ಲಿ ಹಾಕಿದ ಬೆಂಕಿಯು ತಾನೊಂದೇ ಆದರೂ ಹೊಗೆಗಳಾಗಿಯೂ ಕಿಡಿಗಳಾಗಿಯೂ ಉರಿಗಳಾಗಿಯೂ ಕೆಂಡವಾಗಿಯೂ ಆಗುವಂತೆ ಪರಮಾತ್ಮನೇ ಎಲ್ಲವೂ ಆಗಿರುತ್ತಾನೆ - ಎಂಬ ಅಭಿಪ್ರಾಯವನ್ನು ಬಹುಸುಲಭವಾಗಿ ಹೆಂಗಸರಿಗೂ ತಿಳಿಯುವ ರೀತಿಯಲ್ಲಿ ಹೊಗೆಯ ಹೋಲಿಕೆಯಿಂದ ತಿಳಿಸಿಕೊಟ್ಟಿರುತ್ತದೆ. ಮನುಷ್ಯನು ಸ್ವಭಾವವಾಗಿ ಉಸಿರಾಡುತ್ತಿರುತ್ತಾನೆಯೇ ಹೊರತು ಅದಕ್ಕಾಗಿ ಅವನು ಯಾವ ಆಯಾಸವನ್ನೂ ಪಡಬೇಕಾಗಿರುವದಿಲ್ಲ; ಅದರಂತೆಯೇ ಪರಮೇಶ್ವರನು ಶಬ್ದಪ್ರಪಂಚವನ್ನೂ ವಸ್ತುಪ್ರಪಂಚವನ್ನೂ ಹೊರಗೆಡಹುವದಕ್ಕೆ ಯಾವ ಆಯಾಸವನ್ನೂ ಪಡೆಯಬೇಕಾಗಿರುವದಿಲ್ಲ ; ಇಂಥ ಸರ್ವಜ್ಞನವನು, ಇಂಥ ಸರ್ವಶಕ್ತನವನು- ಎಂಬುದನ್ನು ಉಸಿರಿನ ಹೋಲಿಕೆಯಿಂದ ತಿಳಿಸಿಕೊಟ್ಟಿರುತ್ತದೆ.

## ೨. ಆಲದ ಬೀಜ

(ಛಾಂದೋಗ್ಯ)

ಪರಮಾತ್ಮನ ಸ್ವರೂಪವು ನಮಗೆ ಯಾವ ಇಂದ್ರಿಯಕ್ಕೂ ಕಾಣುವ ಹಾಗಿಲ್ಲ. ಆದ್ದರಿಂದ ಅದು ಇಲ್ಲವೇ ಇಲ್ಲವೆಂದು ನಾವು ತಪ್ಪಾಗಿ ಭಾವಿಸಿಕೊಳ್ಳುವೆವು. ಯಾವದು ಇಂದ್ರಿಯಕ್ಕೆ ಕಾಣಿಸುವದಿಲ್ಲವೋ ಅದು ಇಲ್ಲವೇ ಇಲ್ಲವೆಂಬುದು ಅಯುಕ್ತ. ಒಂದು ವಸ್ತುವಿನ ಇರುವಿಕೆಯನ್ನು ಅದರ ಕಾರ್ಯದಿಂದಲೇ ತಿಳಿಯಬೇಕು. ಅದು ತಾನೇ ಕಾಣಬೇಕೆಂದೂ ಕಾಣದಿದ್ದರೆ ಅದು ಇಲ್ಲವೇ ಇಲ್ಲವೆಂದೂ ತಿಳಿಯುವದು ತಪ್ಪು. ಈ ಅಭಿಪ್ರಾಯವನ್ನು ಆಲದ ಬೀಜದ ದೃಷ್ಟಾಂತದಿಂದ **ಉದ್ದಾಲಕನು** ಶ್ವೇತಕೇತುವಿಗೆ ತಿಳಿಸಿಕೊಟ್ಟಿರುತ್ತಾನೆ :-

''ಶ್ವೇತಕೇತೂ, ಒಂದು ಆಲದ ಹಣ್ಣನ್ನು ತೆಗೆದುಕೊಂಡು ಬಾ.''

''ಇಗೋ ಸ್ವಾಮಿ, ತಂದಿದೇನೆ.''

''ಅದನ್ನು ಒಡೆ.''

''ಒಡೆದೆನು, ಸ್ವಾಮಿ.''

''ನಿನಗೆ ಇದರಲ್ಲೇನು ಕಾಣುತ್ತಿದೆ ?''

''ಸ್ವಾಮಿ, ಬಲುಸಣ್ಣದಾದ ಬೀಜಗಳು ಕಾಣಿಸುತ್ತಿವೆ.''

''ಅಯ್ಯ, ಇವುಗಳಲ್ಲಿ ಒಂದನ್ನು ಒಡೆ.''

''ಸ್ವಾಮಿ, ಇಗೋ ಒಡೆದೆನು.''

''ಅದರಲ್ಲೇನು ಕಾಣುತ್ತಿದೆ ?''

''ಏನೇನೂ ಇಲ್ಲ, ಸ್ವಾಮಿ''

ಆಗ ಶ್ವೇತಕೇತುವಿಗೆ ಉದ್ದಾಲಕನು ಹೇಳಿದನೇನೆಂದರೆ : 'ಅಪ್ಪ, ಯಾವ ಸೂಕ್ಷ್ಮವಾದ ಬೀಜದ ರವೆಯನ್ನು ಕಾಣೆನೆನ್ನುತ್ತಿರುವೆಯೋ, ಇಗೋ ಆ ಸೂಕ್ಷ್ಮವಾದ ರವೆಯಿಂದಲೇ ಇಂಥ ದೊಡ್ಡ ಆಲದಮರವು ಬೆಳೆದುನಿಂತಿರುತ್ತದೆ. ಇದೇ ನಿಜವೆಂದು ನಂಬು. ಈ ಪರಮಾರ್ಥವೆಂಬ ಸೂಕ್ಷ್ಮಾಂಶವೇ ಇದಕ್ಕೆಲ್ಲ ಮೂಲವು ; ಅದೇ ಸತ್ಯವಾದದ್ದು, ಅದೇ ಆತ್ಮನು. ಶ್ವೇತಕೇತುವೆ, ಅದು ನೀನೇ ಆಗಿರುವೆ !'

ಆಲದ ಬೀಜವು ಕಣ್ಣಿಗೆ ಕಾಣದಷ್ಟು ಸಣ್ಣದಾದರೂ ಅದರ ಕಾರ್ಯವು ಮಹಾವಟವೃಕ್ಷವಾಗಿರುವಂತೆ ಆತ್ಮನು ಯಾವ ಇಂದ್ರಿಯಗಳಿಗೂ ಗೋಚರನಾಗದೆ ಇದ್ದರೂ ಅವನಿಂದಲೇ ಈ ದೊಡ್ಡ ಜಗತ್ತು ಉಂಟಾಗಿರುತ್ತದೆ.

------

# ೩. ನೀರಿನಲ್ಲಿ ಕರಗಿದ ಉಪ್ಪು

## (ಛಾಂದೋಗ್ಯ)

ಆತ್ಮನು ಎಲ್ಲೆಲ್ಲಿಯೂ ಇರುತ್ತಾನೆ, ಆದರೂ ನಮ್ಮ ಸಾಮಾನ್ಯಬುದ್ಧಿಗೆ ಗೋಚರವಾಗುವದಿಲ್ಲ. ಆದರೂ ಒಂದಾನೊಂದು ಉಪಾಯದಿಂದ ಇವನನ್ನು ಅರಿತುಕೊಳ್ಳಬಹುದು. ಇದಕ್ಕೆ ನೀರಿನಲ್ಲಿ ಕರಗಿದ ಉಪ್ಪಿನ ದೃಷ್ಟಾಂತವನ್ನು ಉಪನಿಷತ್ತಿನಲ್ಲಿ ಕೊಟ್ಟಿರುತ್ತದೆ.

'ಇಗೋ, ಈ ಉಪ್ಪಿನಹರಳನ್ನು ನೀರಿನಲ್ಲಿ ಹಾಕಿಡು. ನಾಳೆ ಬೆಳಿಗ್ಗೆ ನನ್ನ ಬಳಿಗೆ ಬಾ.'

ಶ್ವೇತಕೇತುವು ಹಾಗೆಯೇ ಮಾಡಿದನು. ಆಗ ಉದ್ದಾಲಕನು ನುಡಿದದ್ದೇನೆಂದರೆ : 'ರಾತ್ರೆ ನೀರಿನಲ್ಲಿ ಉಪ್ಪನ್ನು ಹಾಕಿದ್ದೆಯಲ್ಲ, ಅದನ್ನು ಈಚೆಗೆ ತೆಗೆ.'

ಶ್ವೇತಕೇತುವು ನೀರಿನಲ್ಲೆಲ್ಲ ಗರಬಾಡಿನೋಡಿದನು ; ಅದು ಎಲ್ಲಿದೆಯೆಂಬುದು ಕಾಣಿಸಲಿಲ್ಲ.

'ಹೋಗಲಿ, ಅದು ನೀರಿನಲ್ಲಿ ಕರಗಿಹೋಗಿರಬೇಕು, ಅದನ್ನು ಒಂದು ಕೊನೆಯಲ್ಲಿ ಒಂದಿಷ್ಟು ಹೀರಿ ರುಚಿನೋಡು. ಹೇಗಿದೆ ?'

'ಉಪ್ಪಾಗಿದೆ.'

'ನಡುವೆ ಹೀರಿ ರುಚಿನೋಡು. ಹೇಗಿದೆ ?'

'ಉಪ್ಪಾಗಿದೆ.'

'ಆ ಕಡೆಯಲ್ಲಿ ಹೀರಿ ರುಚಿನೋಡು. ಹೇಗಿದೆ ?'

'ಉಪ್ಪಾಗಿದೆ.'

'ಸರಿ. ಅದನ್ನು ಆಚೆಗೆ ಚೆಲ್ಲಿಬಾ.'

ಅವನು ಹಾಗೇ ಮಾಡಿ ''ಅದು ಈ ನೀರಿನಲ್ಲಿಯೇ ಇದೆ'' ಎನ್ನುತ್ತಾ ಬರಲು ತಂದೆಯು ಅಪ್ಪ, ಅದು ಇಲ್ಲಿಯೇ ಇದೆ. ಆದರೂ ನಿನಗೆ ಕಾಣಿಸದೆ ಹೋಯಿತಲ್ಲ! ಎಂದನು.

''ಕಣ್ಣಿನಿಂದಲೂ ಕೈಯಿಂದಲೂ ನೋಡಿದಾಗ ಸಿಕ್ಕದೆ ಇದ್ದರೂ ನಾಲಗೆ ಯಿಂದ ಸವಿನೋಡಿದಾಗ ಉಪ್ಪು ಹೇಗೆ ಸಿಕ್ಕಿತೋ ಹಾಗೆ ಸೂಕ್ಷ್ಮವಾದ ಆತ್ಮವಸ್ತುವು ಈ ಜಗತ್ತಿನಲ್ಲಿಯೇ ಇದ್ದರೂ ನಮ್ಮ ಇಂದ್ರಿಯಗಳಿಗೆ ಕಾಣಿಸದೆ ಇರುತ್ತದೆ. ಆದರೆ ಬೇರೆ ಉಪಾಯದಿಂದ ಅದನ್ನು ಕಾಣಬಹುದು'' ಎಂಬುದು ತಂದೆಯ ಅಭಿಪ್ರಾಯ.

------

## ೪. ಗಂಧಾರದೇಶದವನು

(ಛಾಂದೋಗ್ಯ)

''ಒಬ್ಬ ಮನುಷ್ಯನನ್ನು ಕಳ್ಳನೊಬ್ಬನು ಗಂಧಾರದೇಶದಿಂದ ಕಣ್ಣುಕಟ್ಟಿ ತಂದು ಯಾರೂ ಇಲ್ಲದ ಕಾಡಿನಲ್ಲಿ ಬಿಟ್ಟುಬಿಟ್ಟನು. ಆ ಮನುಷ್ಯನು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ - ನಾಲ್ಕು ದಿಕ್ಕುಗಳಲ್ಲಿಯೂ 'ಕಣ್ಣು ಕಟ್ಟಿದಾರಪ್ಪೊ!' ಎಂದು ಕಿರಿಚಿಕೊಳ್ಳುತ್ತಾ ಅಡ್ಡಾಡುತ್ತಿದ್ದನು. ಆಗ ಅಲ್ಲಿಗೆ ಒಬ್ಬನು ಬಂದು ಕಣ್ಣುಕಟ್ಟನ್ನು ಬಿಚ್ಚಿ 'ಇಗೊ, ಈ ದಿಕ್ಕಿನಲ್ಲಿ ಗಂಧಾರದೇಶವಿದೆ. ಈ ದಿಕ್ಕಿನಲ್ಲಿ ಹೋಗು' ಎಂದನು. ಅವನು ಊರಿಂದೂರಿಗೆ ದಾರಿಯನ್ನು ಕೇಳಿಕೊಂಡು ವಿವೇಕಿಯಾದ್ದರಿಂದ ಗಂಧಾರದೇಶವನ್ನೇ ಸೇರಿದನು.''

ಈ ದೃಷ್ಟಾಂತವನ್ನು ಕೊಟ್ಟು ಉದ್ದಾಲಕನು ಹೇಳುತ್ತಾನೆ: ''ಇಗೊ, ಹೀಗೆಯೇ ಶಿಷ್ಯನು ಆಚಾರ್ಯರ ವಾಕ್ಯದಿಂದ ತತ್ತ್ವವನ್ನು ತಿಳಿದುಕೊಳ್ಳು ತ್ತಾನೆ. ಅವನಿಗೆ ಎಲ್ಲಿಯವರೆಗೆ ಶರೀರಬಂಧದ ಬಿಡುಗಡೆಯಾಗುವದಿಲ್ಲವೋ ಅಲ್ಲಿಯವರೆಗೇ ತಡ. ಆಮೇಲೆ ಬಿಡುಗಡೆಯನ್ನು ಹೊಂದುತ್ತಾನೆ.''

ನಮಗೆ ತಪ್ಪುತಿಳಿವಳಿಕೆಯೆಂಬ ಕಟ್ಟು ಬಿದ್ದು ಕಣ್ಣು ಕಾಣದೆ ಇರುತ್ತದೆ. ಗುರುವು ಬಂದು ಈ ಕಟ್ಟನ್ನು ಕಳಚಿ "ಇಗೋ, ಇದೇ ಪರಮಾರ್ಥವು" ಎಂದು ತಿಳಿಸಿದರೆ ಕೂಡಲೆ ನಮಗೆ ದುಃಖದ ಬಂಧವು ಇಲ್ಲವಾಗಿಬಿಡುತ್ತದೆ. ಈಗ ನಮಗೆ ತತ್ತ್ವವು ತಿಳಿಯದಿದ್ದರೂ ಗುರುಗಳ ಮಾತಿನ ಬಲದಿಂದಲೂ ನಮ್ಮ ವಿವೇಚನಾಶಕ್ತಿಯ ಬಲದಿಂದಲೂ ಜ್ಞಾನವೆಂಬ ಕಣ್ಣನ್ನು ಪಡೆದು ಕೊಂಡು ಪರವಸ್ತುವನ್ನು ಕಂಡುಕೊಳ್ಳಬಹುದಾಗಿರುತ್ತದೆ.

------

## ೫. ಎರಡು ಹಕ್ಕಿಗಳು

(ಮುಂಡಕ)

ನಾವು ಜೀವರು, ಸಂಸಾರದ ಸುಖದುಃಖವನ್ನು ಅನುಭವಿಸುತ್ತಿರುವ ವರು. ಈಶ್ವರನು ಸರ್ವಜ್ಞನು, ಸರ್ವಶಕ್ತನು ; ಸಂಸಾರದ ಸುಖದುಃಖ ಭೋಗವು ಅವನಿಗೆ ಯಾವಾಗಲೂ ಇಲ್ಲವೇ ಇಲ್ಲ. ಒಂದೇ ಶರೀರದಲ್ಲಿ ನಮ್ಮ ಜೀವಸ್ವರೂಪವೂ ಇರುತ್ತದೆ. ಪರಮಾತ್ಮಸ್ವರೂಪವೂ ಇದೆ, ಜೀವ ಸ್ವರೂಪವನ್ನು ತಿಳಿದು ದುಃಖಿಸುತ್ತಿರುವ ನಾವೇ ಪರಮಾತ್ಮಸ್ವರೂಪವನ್ನು ಕಂಡುಕೊಂಡು ಆನಂದಿಸಬಹುದು. ಅದನು ಅಂಗೀರಸನೆಂಬ ಋಷಿಯು ಶೌನಕನಿಗೆ ಎರಡು ಹಕ್ಕಿಗಳ ದೃಷ್ಟಾಂತದಿಂದ ತಿಳಿಸಿಕೊಟ್ಟಿರುತ್ತಾನೆ.

"ಎರಡು ಹಕ್ಕಿಗಳಿವೆ. ಅವು ಯಾವಾಗಲೂ ಜೊತೆಯಲ್ಲಿಯೇ ಇರುತ್ತವೆ, ಒಂದಕ್ಕೊಂದು ಗೆಳೆಯರಾಗಿಯೇ ಇವೆ. ಅವೆರಡೂ ಒಂದೇ ಮರವನ್ನು ಆಶ್ರಯಿಸಿಕೊಂಡಿರುತ್ತವೆ. ಇವೆರಡರಲ್ಲಿ ಒಂದು ಹಣ್ಣನ್ನು ಸವಿದು ತಿನ್ನುತ್ತಿದೆ, ಮತ್ತೊಂದು ತಿನ್ನದೆ ನೋಡುತ್ತಲೇ ಇದೆ."

"ಅದೇ ಮರದಲ್ಲಿ ಇಳಿದುಕೂತಿರುವ ಮನುಷ್ಯನು ಸ್ವಾತಂತ್ರ್ಯವಿಲ್ಲದೆ ತಪ್ಪುತಿಳಿವಳಿಕೆಯಿಂದ ಶೋಕಿಸುತ್ತಿರುವನು. ಯಾವಾಗ ಸಾಧನಗಳಿಂದ

ಸೇವೆಮಾಡಿ ಇನ್ನೊಬ್ಬನಾದ ಈಶ್ವರನನ್ನು ಕಂಡುಕೊಳ್ಳುವನೋ ಆಗ 'ಈ ಜಗತ್ತೆಲ್ಲ ಈತನ ಮಹಿಮೆಯು' ಎಂದು ತಿಳಿದುಕೊಂಡು ಶೋಕವನ್ನು ನೀಗುವನು. ಯಾವಾಗ ಜ್ಯೋತಿರೂಪನಾದ ಈಶ್ವರನನ್ನು ಜಗತ್ಕರ್ತನೆಂದೂ ಎಲ್ಲಕ್ಕೂ ಹೆಚ್ಚಿನ ಮೂಲಕಾರಣನೆಂದೂ ಕಂಡುಕೊಳ್ಳುವನೋ ಆಗ ಜ್ಞಾನಿಯು ಪುಣ್ಯಪಾಪಗಳನ್ನು ಕೊಡವಿಕೊಂಡು ಏತರೊಂದರ ಸೋಂಕೂ ಇಲ್ಲದೆ ಆ ಈಶ್ವರನ ಅತ್ಯಂತಸಾಮ್ಯವನ್ನು ಹೊಂದುವನು.''

## ೬. ಬಿಲ್ಲು, ಬಾಣ

(ಮುಂಡಕ)

ಮನುಷ್ಯನು ತನ್ನ ಜನ್ಮದ ಸಾಫಲ್ಯವನ್ನು ಪಡೆಯಬೇಕಾದರೆ ತನ್ನ ಬಾಳಿನ ಹೆಗ್ಗುರಿ ಯಾವದೆಂಬುದನ್ನು ಯಾವಾಗಲೂ ಮರೆಯದೆ ಇರಬೇಕು. ಆ ಗುರಿಯನ್ನು ಮುಟ್ಟುವದಕ್ಕೆ ಬೇಕಾದ ಸಾಧನವನ್ನು ತಪ್ಪದೆ ಉಪಯೋಗಿಸಬೇಕು. ತನ್ನ ಗುರಿಯನ್ನು ಮುಟ್ಟಿದಮೇಲೆಯೇ ತೃಪ್ತಿಯನ್ನು ಹೊಂದಬೇಕು. ಇಷ್ಟು ಅಭಿಪ್ರಾಯವನ್ನು ತಿಳಿಸುವದಕ್ಕೆ ಅಂಗಿರಸನು ಬಿಲ್ಲುಬಾಣದ ದೃಷ್ಟಾಂತವನ್ನುಪಯೋಗಿಸಿ ಒಂದು ರೂಪಕವನ್ನು ಕೊಟ್ಟಿರುತ್ತಾನೆ.

''ಉಪನಿಷತ್ತಿನ ಬಿಲ್ಲನ್ನು ತೆಗೆದುಕೊಳ್ಳಬೇಕು. ಉಪಾಸನೆಯಿಂದ ಹರಿತಗೊಳಿಸಿದ ಮಹಾಸ್ತ್ರವಾದ ಬಾಣವನ್ನು ಅದರಲ್ಲಿ ಹೂಡಬೇಕು. ಅದನ್ನೇ ಅದೇ ಭಾವದಿಂದ ಬಿಗಿದೆಳೆದು ಆ ಅಕ್ಷರವೆಂಬ ಗುರಿಯನ್ನೇ ಹೊಡೆಯಯ್ಯ! ಓಂಕಾರವೆಂಬುದೇ ಬಿಲ್ಲು, ತಾನೇ ಬಾಣವು, ಬ್ರಹ್ಮವೇ ಗುರಿಯೆನಿಸುವದು. ಎಚ್ಚರಿಕೆಯಿಂದ ಬಾಣವನ್ನು ಹೊಡೆಯಬೇಕು, ಬಾಣದಂತೆ ತನ್ಮಯನಾಗಬೇಕು.''

ಈ ರೂಪಕವು ಎಷ್ಟು ಸುಂದರವಾಗಿದೆ, ನೋಡಿರಿ ! ಬಾಣವನ್ನು ಮೊದಲು ಹರಿತಮಾಡಿಟ್ಟುಕೊಳ್ಳಬೇಕು, ಇಲ್ಲದಿದ್ದರೆ ಗುರಿಯನ್ನು ಹೊಡೆದರೂ ಪ್ರಯೋಜನವಿಲ್ಲ. ಆದ್ದರಿಂದ ಆತ್ಮನನ್ನು ಈಶ್ವರನ ಚಿಂತೆಯಿಂದ ಹರಿತವಾಗಿಸಿಕೊಳ್ಳಬೇಕು ; ಎಂದರೆ ಸ್ಥೂಲವಾಗಿರುವ ಶರೀರಬುದ್ಧಿಯೇ ಮುಂತಾದವುಗಳಿಂದ ಬಿಡಿಸಿಕೊಳ್ಳಬೇಕು- ಎಂದರ್ಥ. ಬಿಲ್ಲು ಉತ್ತಮವಾಗಿರಬೇಕು. ಹಾಗಿಲ್ಲದಿದ್ದರೆ ಬಾಣವು ಎಷ್ಟು ಹರಿತವಾಗಿದ್ದರೂ ಅದು ಲಕ್ಷ್ಯವನ್ನು ಮುಟ್ಟಲಾರದು. ಆದ್ದರಿಂದ ಉಪನಿಷತ್ತಿನಲ್ಲಿ ಹೇಳಿರುವ ಓಂಕಾರವನ್ನು ಬಿಲ್ಲನ್ನಾಗಿ ಮಾಡಿಕೊಳ್ಳಬೇಕು. ವೇದದಲ್ಲಿ ಹೇಳಿರುವ ಪರಮಾತ್ಮನ ಹೆಸರುಗಳಲ್ಲೆಲ್ಲ ಓಂಕಾರವು ಅತ್ಯುತ್ತಮವಾದದ್ದು. ಅದಕ್ಕೂ ಪರಮಾತ್ಮನಿಗೂ ನಿಜವಾಗಿ ಭೇದವೇ ಇಲ್ಲವೆಂಬುದನ್ನು **"ಮಾಂಡೂಕ್ಯ"**ವೆಂಬ ಉಪನಿಷತ್ತಿನಲ್ಲಿ ತೋರಿಸಿಕೊಟ್ಟಿರುತ್ತದೆ. ಅಂತೂ ವೇದೋಕ್ತವಾದ ರೀತಿಯಿಂದ ಓಂಕಾರದ ಮೂಲಕವಾಗಿ ತನ್ನ ಸ್ವರೂಪವನ್ನು ಪರಮೇಶ್ವರನ ಚಿಂತನೆಯಿಂದ ಸಜ್ಜುಗೊಳಿಸಿಕೊಂಡು ಆಮೇಲೆಯೇ ಪರಮಾತ್ಮಸ್ವರೂಪವನ್ನು ಅರಿಯುವದಕ್ಕೆ ಪ್ರಯತ್ನಿಸಬೇಕು. ತಾನು ಮುಟ್ಟಬೇಕಾದದ್ದು ಬ್ರಹ್ಮವನ್ನೇ. ಕೊನೆಗೆ ಬ್ರಹ್ಮವನ್ನು ಮುಟ್ಟಿ ಬ್ರಹ್ಮಮಯನಾಗಿಬಿಡಬೇಕು. ಬಾಣವು ಗುರಿಯಲ್ಲಿ ಸೇರಿ ಒಂದಾಗುವಂತೆ ಬ್ರಹ್ಮದಲ್ಲಿ ಒಂದಾಗಿಬಿಡಬೇಕು. ಇದೇ ನಮ್ಮ ಜೀವನಕ್ಕೆ ಗುರಿಯಾಗಿರಬೇಕು.

------

## ೭. ಗಾಡಿ, ಕುದುರೆ

(ಕಠ)

ಪರಮೇಶ್ವರನನ್ನು ಸೇರುವದೇ ಮಾನವನ ಗುರಿ. ಆದ್ದರಿಂದ ಆ ಉದ್ದೇಶಕ್ಕೆ ತಕ್ಕಂತೆಯೇ ಪ್ರತಿಯೊಬ್ಬನೂ ತನ್ನ ಜೀವನವನ್ನು ಸಾಗಿಸಬೇಕು. ತನ್ನ ಶರೀರಾದಿಗಳನ್ನು ಆ ಪರಮಫಲವು ದೊರಕುವದಕ್ಕೆ ತಕ್ಕಂತೆ

ಉಪಯೋಗಿಸಿಕೊಂಡು ಜೀವಿಸುವವನೇ ವಿವೇಕಿಯು, ಹಾಗಿಲ್ಲದವನು ಮೂರ್ಖನು. ಈ ಅಭಿಪ್ರಾಯವನ್ನು ಯಮನು ನಚಿಕೇತನಿಗೆ ರಥಿಕನ ದೃಷ್ಟಾಂತದಿಂದ ಹೇಗೆ ವಿಶದಗೊಳಿಸಿಕೊಟ್ಟಿರುತ್ತಾನೆ, ನೋಡಿ!

''ನೀನೇ ಒಬ್ಬ ರಥಿಕನೆಂದು ತಿಳಿದುಕೊ. ಶರೀರವೇ ಒಂದು ಗಾಡಿಯು, ಬುದ್ಧಿಯೇ ಸಾರಥಿಯು, ಮನಸ್ಸೇ ಕಡಿವಾಣವು. ಇಂದ್ರಿಯ ಗಳನ್ನು ಕುದುರೆಗಳೆನ್ನುವರು, ವಿಷಯಗಳೇ ಅವುಗಳಿಗೆ ದಾರಿಗಳು, ಯಾವನಿಗೆ ಸರಿಯಾದ ಬುದ್ಧಿಯಿರುವದಿಲ್ಲವೋ, ಮನಸ್ಸು ಹಿಡಿತದಲ್ಲಿರುವ ದಿಲ್ಲವೋ ಅವನಿಗೆ, ಕೆಟ್ಟಕುದುರೆಗಳು ಅವಿವೇಕಿಯಾದ ಸಾರಥಿಗೆ ಅಳವಾಗದೆ ಹೋಗುವಂತೆ, ಇಂದ್ರಿಯಗಳು ವಶವಾಗದೆ ಹೋಗುತ್ತವೆ. ಆದರೆ ಯಾವನು ತಿಳಿವಳಿಕೆಯುಳ್ಳವನಾಗಿ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡಿರುವನೋ ಅವನಿಗೆ, ಒಳ್ಳೆಯ ಕುದುರೆಗಳು ಜಾಣನಾದ ಸಾರಥಿಯ ಕೈಯಲ್ಲಿದ್ದುವಂತೆ ಇಂದ್ರಿಯಗಳು ವಶವಾಗಿರುತ್ತವೆ.

''ಯಾವನು ತಿಳಿವಳಿಕೆಯಿಲ್ಲದೆ ಮನಸ್ಸೂ ಹಿಡಿತದಲ್ಲಿಲ್ಲದೆ ಯಾವಾಗಲೂ ಅಶುಚಿಯಾಗಿಯೇ ಇರುವನೋ ಅವನು ಮುಟ್ಟಬೇಕಾದ ಸ್ಥಳವನ್ನು ಮುಟ್ಟುವದಿಲ್ಲ, ಸಂಸಾರವನ್ನೂ ಪಡೆಯುತ್ತಾನೆ. ಆದರೆ ಯಾವನು ತಿಳಿವಳಿಕೆಯುಳ್ಳವನಾಗಿ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಯಾವಾಗಲೂ ಶುಚಿಯಾಗಿರುವನೋ ಅವನು ಆ ಸ್ಥಳವನ್ನು ಸೇರುತ್ತಾನೆ, ಅಲ್ಲಿಂದ ಮತ್ತೆ ಮರಳಿ ಬಂದು ಇಲ್ಲಿ ಹುಟ್ಟುವದಿಲ್ಲ. ಒಳ್ಳೆಯ ಬುದ್ಧಿಯನ್ನು ಸಾರಥಿಯಾಗಿ ಮಾಡಿಕೊಂಡು ಮನಸ್ಸೆಂಬ ಕಡಿವಾಣವನ್ನು ಬಿಗಿಹಿಡಿದು ಯಾವನು ಗಾಡಿಯನ್ನು ನಡೆಸುವನೋ ಅವನು ದಾರಿಯ ಕೊನೆಯನ್ನು ಕಾಣುವನು, ಆ ವಿಷ್ಣುವಿನ ಪರಮಪದವನ್ನು ಮುಟ್ಟುವನು.''

------------

# ೮. ದೊಡ್ಡಮೀನು

## (ಬೃಹದಾರಣ್ಯಕ)

ಮನುಷ್ಯನು ಈ ಪ್ರಪಂಚದಲ್ಲಿ ವ್ಯವಹಾರದೊಳಗೆ ಸಿಕ್ಕಿಕೊಂಡು ಬಿದ್ದಿರುತ್ತಾನೆ. ಇದರ ಮರ್ಮವನ್ನೂ ಉದ್ದೇಶವನ್ನೂ ಅರಿತುಕೊಂಡು ಆತ್ಮಜ್ಞಾನವನ್ನು ಸಂಪಾದಿಸಿಕೊಂಡರೆ ಇದರಿಂದ ಪಾರಾಗುತ್ತಾನೆ. ಇಲ್ಲದಿದ್ದರೆ ಇದಕ್ಕೇ ವಶನಾಗಿ ಸಂಸಾರದಲ್ಲಿ ಮತ್ತೆಮತ್ತೆ ಹುಟ್ಟಿ ಸುಖದುಃಖಗಳ ಹೊಡೆತಕ್ಕೇ ಪಕ್ಕಾಗುತ್ತಾನೆ.

ಸರಿಯಾಗಿ ವಿಚಾರಮಾಡಿದರೆ ನಮ್ಮ ಆತ್ಮಸ್ವರೂಪವು ಯಾವದೊಂದು ವ್ಯವಹಾರಕ್ಕೂ ಒಳಗಾಗದೆ ವ್ಯವಹಾರವನ್ನು ಮೀರಿರುವದೆಂದು ತಿಳಿದು ಬರುತ್ತದೆ. ಇದನ್ನು ತಿಳಿಸುವದಕ್ಕೆ ಯಾಜ್ಞ್ಯವಲ್ಕ್ಯನು ದೊಡ್ಡ ಮೀನಿನ ದೃಷ್ಟಾಂತವನ್ನು ಜನಕರಾಯನಿಗೆ ಉದಾಹರಿಸುತ್ತಾನೆ.

''ಹೇಗೆ ದೊಡ್ಡಮೀನು ಎರಡು ದಡವನ್ನೂ - ಈಚೆಯ ದಡವನ್ನೂ ಆಚೆಯ ದಡವನ್ನೂ - ಹೋಗಿ ಮುಟ್ಟಿಬರುತ್ತಿರುವದೋ ಇದರಂತೆಯೇ ಈ ಪುರುಷನು ಈ ಎರಡು ಸ್ಥಾನಗಳನ್ನೂ - ಎಚ್ಚರ, ಕನಸು - ಎಂಬ ಎರಡು ಅವಸ್ಥೆಗಳನ್ನೂ - ಸಂಚರಿಸಿಕೊಂಡಿರುವನು .''

ನದಿಯ ನೀರು ಹರಿಯುವಂತೆ ವ್ಯವಹಾರವು ಜೋರಿನಿಂದ ಹರಿಯುತ್ತಲೇ ಇರುವದು. ಮೀನು ಬಲವಾದ ನದಿಯ ಸೆಳೆತಕ್ಕೂ ಸಿಕ್ಕದೆ ಪ್ರವಾಹಕ್ಕೆ ಅಡ್ಡಲಾಗಿ ಹರಿಯುವಂತೆಯೇ, ಅದು ಈಚೆಯ ದಡದಿಂದ ಆಚೆಯ ದಡಕ್ಕೂ ಆಚೆಯ ದಡದಿಂದ ಈಚೆಯ ದಡಕ್ಕೂ ಹೋಗಿಬರುತ್ತಿರುವಂತೆಯೇ ಜೀವಾತ್ಮನು ಎಚ್ಚರದಿಂದ ಕನಸಿಗೂ ಕನಸಿನಿಂದ ಎಚ್ಚರಕ್ಕೂ ಹರಿದಾಡುತ್ತಿರುವಂತಿರುವನು. ಅವನಿಗೆ ಎಚ್ಚರದ ವ್ಯವಹಾರವೂ ತಗಲುವ ಹಾಗಿಲ್ಲ. ಕನಸಿನ ಮುಸುಕೂ ಸೋಕುವ ಹಾಗಿಲ್ಲ. ಅವನು ಎರಡವಸ್ಥೆಗಳನ್ನೂ ನೋಡುತ್ತಿರುವನು, ಎರಡನ್ನೂ ಮೀರಿರುವನು.

------------

# ೯. ದಾರಕಟ್ಟಿದ ಹಕ್ಕಿ

(ಛಾಂದೋಗ್ಯ)

ಜೀವನು ಸ್ವತಂತ್ರನಲ್ಲ. ಅವನು ಪರಮಾತ್ಮನ ಸ್ವರೂಪದಲ್ಲಿಯೇ ನೆಲೆಸಿರುವದಕ್ಕೆ ತಕ್ಕವನಾಗಿರುತ್ತಾನೆ. ಆದರೂ ಅವನು ಈಶ್ವರನನ್ನು ಬಿಟ್ಟು ತಾನೇ ಬೇರೆ ವ್ಯವಹಾರವನ್ನು ಮಾಡಿಕೊಳ್ಳುವೆನೆಂದು ಹೋಗುತ್ತಾನೆ. ಆದರೆ ಅದು ಕೊನೆಯವರೆಗೂ ಸಾಗುವದೇ ಇಲ್ಲ. ಇದನ್ನು ತಿಳಿಸುವದಕ್ಕೆ ಉದ್ದಾಲಕನು ದಾರಕಟ್ಟಿದ ಹಕ್ಕಿಯ ದೃಷ್ಟಾಂತವನ್ನು ಕೊಟ್ಟಿರುತ್ತಾನೆ.

'ಹಕ್ಕಿಯು ದಿಕ್ಕುದಿಕ್ಕುಗೂ ಹಾರಾಡಿ ಮತ್ತೆಲ್ಲಿಯೂ ನಿಲ್ಲುವದಕ್ಕೆ ತಾಣವನ್ನು ಕಾಣದೆ ಕೊನೆಗೆ ತನ್ನನ್ನು ಕಟ್ಟಿಹಾಕಿರುವ ಮೂಲಸ್ಥಾನವನ್ನೇ ಸೇರಿಕೊಳ್ಳುತ್ತದೆ. ಇದು ಹೇಗೋ ಅದರಂತೆಯೇ, ಎಲೈ ಶ್ವೇತಕೇತುವೆ, ಈ ಜೀವನು ಮನಸ್ಸಿನ ಅಳತೆಗೆ ಕಟ್ಟುಬಿದ್ದು ದಿಕ್ಕುದಿಕ್ಕಿಗೂ ಹಾರುತ್ತಾನೆ; ಅವನಿಗೆ ನಿಲ್ಲುವದಕ್ಕೆ ಎಲ್ಲಿಯೂ ತಾಣವು ದೊರೆಯದೆ ಹೋಗುತ್ತದೆ. ಆಗ ತನ್ನ ಪ್ರಾಣರೂಪನಾದ ಪರಮೇಶ್ವರನನ್ನೇ ಆಶ್ರಯಿಸುತ್ತಾನೆ. ಜೀವನು ಈ ಪ್ರಾಣಕ್ಕೆ ಕಟ್ಟುಬಿದ್ದವನಾಗಿರುತ್ತಾನೆ.

ಹಕ್ಕಿಗೂ ಬಂಧನಸ್ಥಾನಕ್ಕೂ ಎಂದೆಂದಿಗೂ ಗಂಟುಬಿದ್ದಿರುವಂತೆ ಜೀವನಿಗೂ ಈಶ್ವರನಿಗೂ ಎಂದೆಂದಿಗೂ ಗಂಟುಬಿದ್ದಿರುತ್ತದೆ. ಜೀವನು ಎಚ್ಚರಕನಸುಗಳಲ್ಲಿ ಅಲ್ಲಿ ಇಲ್ಲಿ ಹರಿದಾಡುತ್ತಾ ವ್ಯವಹಾರಮಾಡುತ್ತಿದ್ದರೂ ಈಶ್ವರನನ್ನು ಬಿಟ್ಟು ಎಲ್ಲಿಯೂ ಹೋಗಲೇ ಆರನು ; ಆಗಲೂ ಅವನು ಈಶ್ವರನ ಕಟ್ಟಿಗೆ ಒಳಪಟ್ಟೇ ಇರುತ್ತಾನೆ. ಆದರೆ ಅವನಿಗೆ ವ್ಯವಹಾರದಲ್ಲಿ ಶ್ರಮವಾದರಂತೂ ನೆಲೆನಿಲ್ಲುವದಕ್ಕೆ ಪರಮೇಶ್ವರನೇ ಅಲ್ಲದೆ ಮತ್ತೆ ಯಾವ ಸಾಧನವೂ ಇಲ್ಲವೇ ಇಲ್ಲ. ಆದ್ದರಿಂದಲೇ ಪ್ರತಿದಿನವೂ ನಿದ್ರೆಯಲ್ಲಿ ಅವನು ಪರಮಾತ್ಮನನ್ನೇ ಆಶ್ರಯಿಸಿ ವಿಶ್ರಾಂತಿಹೊಂದುತ್ತಾನೆ.

------------

# ೧೦. ಜೇನುತುಪ್ಪ

(ಛಾಂದೋಗ್ಯ)

ಯಾವ ಜೀವನೇ ಆಗಲಿ, ಈಶ್ವರನಲ್ಲಿ ಒಂದಾಗತಕ್ಕವನು. ಅವನು ತನ್ನ ವ್ಯಕ್ತಿತ್ವವನ್ನು ಬೇರೆಯಾಗಿಯೇ ಇಟ್ಟುಕೊಳ್ಳುವನೆಂದು ನಿರೀಕ್ಷಿಸುವದಕ್ಕೆ ಆಗುವಹಾಗೆಯೇ ಇಲ್ಲ. ಈಶ್ವರನಲ್ಲಿ ಯಾರೇ ಸೇರಿದರೂ ಈಶ್ವರನ ಸ್ವರೂಪವನ್ನೇ ಹೊಂದುತ್ತಾರೆ. ಇದನ್ನು ತಿಳಿಸುವದಕ್ಕೆ ಶ್ವೇತಕೇತುವಿನ ತಂದೆಯು ಜೇನುತುಪ್ಪದ ದೃಷ್ಟಾಂತವನ್ನು ಉದಾಹರಿಸಿರುತ್ತಾನೆ.

''ಅಪ್ಪ, ಶ್ವೇತಕೇತು, ಹೇಗೆ ಜೇನುಹುಳುಗಳು ಜೇನುತುಪ್ಪವನ್ನು ಮಾಡುವವೋ, ಹೇಗೆ ಅವುಗಳು ಬೇರೆಬೇರೆಕಡೆಯಲ್ಲಿರುವ ಗಿಡಗಳ ಹೂವಿನ ಮಕರಂದವನ್ನು ತಂದು ಕೂಡಿಹಾಕಿ ಒಂದು ರಸವನ್ನು ಮಾಡಿಬಿಡುವವೋ, ಆಮೇಲೆ ಆ ರಸಗಳು 'ನಾನು ಇಂಥ ಗಿಡದ ರಸವು, ನಾನು ಇಂಥ ಗಿಡದ ರಸವು' ಎಂದು ವಿಂಗಡವಾಗಿ ಉಳಿದುಕೊಳ್ಳಲಾರವೋ, ಇದೇ ರೀತಿಯಲ್ಲಿ ಎಲ್ಲಾ ಜೀವರುಗಳೂ ಸದ್ರೂಪವಾದ ಬ್ರಹ್ಮದಲ್ಲಿ ಬೆರೆತುಕೊಂಡರೆ 'ನಾವು ಸದ್ಬ್ರಹ್ಮದಲ್ಲಿ ಸೇರಿಕೊಂಡೆವು' ಎಂದು ಅರಿಯದೆ ಇರುವವು''

ನಿದ್ರೆಯಲ್ಲಿ, ಸಾವಿನಲ್ಲಿ, ಪ್ರಲಯದಲ್ಲಿ - ನಾವೆಲ್ಲರೂ ಆ ಬ್ರಹ್ಮ ಸ್ವರೂಪದಲ್ಲಿಯೇ ಸೇರಿಕೊಂಡುಬಿಡುವೆವು. ಆಗ 'ನಾನು ಇಂಥವನು' ಎಂದು ಬೇರೆಯಾಗಿ ನಮ್ಮ ರೂಪದಲ್ಲಿ ಇರುವದಕ್ಕೆ ಸಾಧ್ಯವೇ ಇಲ್ಲ. ಆದರೂ ನಾವು ಈಗ ಅವಿವೇಕದಿಂದ ನಾವು ನಾವು ಬೇರೆಬೇರೆಯೆಂದು ಹೆಮ್ಮೆ ಪಡುತ್ತಿರುವೆವು. ಇಲ್ಲದ ಸಲ್ಲದ ತಾರತಮ್ಯಗಳನ್ನು ಮನಸ್ಸಿಗೆ ಹತ್ತಿಸಿಕೊಂಡು ಸಂಕಟ ಪಡುತ್ತಿರುವೆವು. ಆದ್ದರಿಂದ ನಿಜವಾಗಿ ಈಗಲೂ ಆ ಪರಮಾತ್ಮನಲ್ಲಿಯೇ ನಾವೆಲ್ಲರೂ ಇರುತ್ತೇವೆಂಬುದನ್ನು ತಿಳಿದುಕೊಳ್ಳಬೇಕು.

------------

# ೧೧. ಶಬ್ದಗಳು, ಶಬ್ದಸಾಮಾನ್ಯ

## (ಬೃಹದಾರಣ್ಯಕ)

ಈಗಲೂ ನಾವು ಪರಮಾತ್ಮನಲ್ಲಿಯೇ ಇರುವೆವು. ಪರಮಾತ್ಮನಿಗಿಂತ ಬೇರೆಯಾಗಿ ಈಗಲೂ ಏನೇನೂ ಇಲ್ಲವೇ ಇಲ್ಲ - ಎಂಬುದನ್ನು ಹೇಗೆ ತಿಳಿದುಕೊಳ್ಳಬೇಕು ? - ಎಂದರೆ ಎಲ್ಲದರಲ್ಲಿಯೂ ಪರಮಾತ್ಮನ ಚೈತನ್ಯವೇ ಸೇರಿಕೊಂಡಿರುವದರಿಂದ ಇದಕ್ಕೊಂದು ದೃಷ್ಟಾಂತವನ್ನು ಯಾಜ್ಞವಲ್ಕ್ಯ - ಮೈತ್ರೇಯಿಸಂವಾದದಲ್ಲಿ ಕಾಣಬಹುದು.

''ನಗಾರಿಯನ್ನು ಹೊಡೆಯುತ್ತಿರುವಾಗ ಹೊರಗೆ ಕೇಳಿಬರುವ ಬೇರೆ ಬೇರೆಯ ಶಬ್ದಗಳನ್ನು ಅವುಗಳ ರೂಪದಿಂದಲೇ ಅರಿಯುವದಕ್ಕೆ ಆಗುವದಿಲ್ಲ; 'ಇವು ನಗಾರಿಯ ಶಬ್ದಗಳು' ಎಂದು ಅರಿಯುವದರಿಂದ ಮಾತ್ರವೇ ಅವುಗಳನ್ನು ಅರಿಯಬಹುದು, ನಗಾರಿಯನ್ನು ಹೊಡೆದದ್ದರಿಂದಾದದ್ದೆಂದು' ಶಬ್ದಸಾಮಾನ್ಯವನ್ನು ಅರಿತುಕೊಂಡರೆ ಮಾತ್ರ ಬೇರೆಬೇರೆಯ ವಿಶೇಷ ಶಬ್ದಗಳನ್ನೂ ಅರಿತುಕೊಂಡಂತಾಗುತ್ತದೆ. ಶಂಖವನ್ನು ಧ್ವನಿಮಾಡುತ್ತಿರುವಾಗ ಹೊರಗೆ ಕೇಳಿಬರುವ ಬೇರೆಬೇರೆಯ ಶಬ್ದಗಳನ್ನು ಆಯಾ ರೂಪದಿಂದಲೇ ಅರಿಯುವದಕ್ಕೆ ಆಗುವದಿಲ್ಲ ; 'ಇವು ಶಂಖದ ಧ್ವನಿಗಳು' ಎಂದು ಅರಿಯುವದರಿಂದಲೇ, ಶಂಖವನ್ನೂದಿದ ಧ್ವನಿಯೆಂಬ ಸಾಮಾನ್ಯವನ್ನು ಅರಿತುಕೊಳ್ಳುವದರಿಂದಲೇ, ಆಯಾ ಶಬ್ದವನ್ನು ಅರಿತುಕೊಳ್ಳಬಹುದು. ವೀಣೆಯನ್ನು ಬಾರಿಸುವಾಗ ಆಗುವ ಹೊರಗಿನ ಶಬ್ದಗಳನ್ನು ಆಯಾ ರೂಪದಿಂದಲೇ ಅರಿತುಕೊಳ್ಳುವದಕ್ಕೆ ಆಗುವದಿಲ್ಲ; ವೀಣೆಯ ಧ್ವನಿಯನ್ನು ಅರಿತುಕೊಳ್ಳುವದರಿಂದಲೇ, ಇದು ವೀಣೆಯನ್ನು ಬಾರಿಸುವದರಿಂದಾದ ಧ್ವನಿಯೆಂದು ಸಾಮಾನ್ಯವನ್ನು ಅರಿತುಕೊಳ್ಳುವದರಿಂದಲೇ, ಆಯಾ ಶಬ್ದಗಳನ್ನು ಅರಿತುಕೊಳ್ಳಬಹುದು.''

ಲೋಕದಲ್ಲಿ ಚೇತನಗಳೂ ಅಚೇತನಗಳೂ ಅನೇಕವಾಗಿರುತ್ತವೆ, ಅವುಗಳು ಸಾಮಾನ್ಯವಿಶೇಷರೂಪವಾಗಿಯೇ ತೋರಿಕೊಳ್ಳುತ್ತವೆ. ಎಲ್ಲೆಲ್ಲಿಯೂ ಸಾಮಾನ್ಯವನ್ನು ಅರಿತುಕೊಳ್ಳುವದರಿಂದಲೇ ವಿಶೇಷಗಳನ್ನು ಅರಿತುಕೊಳ್ಳಬಹುದಾಗಿರುತ್ತದೆ. ಇಂಥ ಸಾಮಾನ್ಯಗಳೆಲ್ಲ ಒಂದೇ ಒಂದು ಸಾಮಾನ್ಯದಲ್ಲಿ ತೋರಿಕೊಳ್ಳುವವಾಗಿರುತ್ತವೆ. ನಗಾರಿಯ ಶಬ್ದ, ಶಂಖದ ಶಬ್ದ, ವೀಣೆಯ ಶಬ್ದ - ಎಂಬ ಸಾಮಾನ್ಯಗಳು ಕೂಡ ಶಬ್ದ ಎಂಬ ಸಾಮಾನ್ಯದಲ್ಲಿಯೇ ಅಡಕವಾಗಿಬಿಡುವಂತೆ ಲೋಕದಲ್ಲಿ ಕಾಣಬರುವ ಸಾಮಾನ್ಯವಿಶೇಷಗಳೆಲ್ಲವೂ ಕೊನೆಗೆ ಚೈತನ್ಯರೂಪವಾದ ಬ್ರಹ್ಮದಲ್ಲಿಯೇ ಅಡಕವಾಗಿರುತ್ತವೆ. ಬ್ರಹ್ಮವನ್ನು ಬಿಟ್ಟು ಯಾವ ಶಬ್ದಸ್ಪರ್ಶರೂಪರಸ ಗಂಧಗಳೂ ಇರುವದೇ ಇಲ್ಲ.

-------------

## ೧೨. ಉಪ್ಪಿನ ಹರಳು

(ಬೃಹದಾರಣ್ಯಕ)

ಪರಮಾತ್ಮನಲ್ಲಿಯೇ ನಾವುಗಳೆಲ್ಲರೂ ಇರುತ್ತಿದ್ದರೂ ಈಗ ನಾವು ಬೇರೆಬೇರೆಯೆಂಬ ಭಾವನೆಯೇ ನಮಗೆ ಇರುತ್ತದೆ. ನಿಜವಾಗಿ ನಾವು ಪರಮಾತ್ಮನಿಗಿಂತ ಬೇರೆಯಾಗಿ ಯಾವಾಗಲೂ ಇಲ್ಲವೇ ಇಲ್ಲ - ಎಂಬುದು ಸರಿಯಾದ ತಿಳಿವಳಿಕೆಯಿಂದ ನಮಗೆ ಬರುತ್ತದೆ. ನಾವು ಯಾವಾಗಲೂ ಪರಮಾತ್ಮಸ್ವರೂಪರೇ, ಪರಮಾತ್ಮಸ್ವರೂಪವು ಯಾವಾಗಲೂ ತನಗೆರಡನೆಯದಿಲ್ಲದ್ದು - ಎಂಬ ಪರಮಾರ್ಥವು ಆಗ ಹೊರಪಡುತ್ತದೆ. ಇದನ್ನು ತಿಳಿಯಪಡಿಸುವದಕ್ಕೆ ಯಾಜ್ಞವಲ್ಕ್ಯರು ಉಪ್ಪಿನ ಹರಳಿನ ದೃಷ್ಟಾಂತವನ್ನು ಕೊಟ್ಟಿರುತ್ತಾರೆ.

''ಎಲೈ ಮೈತ್ರೇಯಿ, ಉಪ್ಪಿನ ಹರಳನ್ನು ನೀರಿನಲ್ಲಿ ಎಸೆದರೆ ಹೇಗೆ ಅದು ನೀರೇಆಗಿ ಕರಗಿಹೋಗುತ್ತದೆಯೋ, ಅದನ್ನು ಮೇಲಕ್ಕೆ ಎತ್ತುವದಕ್ಕೆ ಹೇಗೆ ಆಗುವದಿಲ್ಲವೋ, ಹೇಗೆ ಆ ನೀರು ಎಲ್ಲೆಲ್ಲಿ ನೋಡಿದರೂ ಉಪ್ಪೇ ಆಗಿರುವದೋ, ಅದರಂತೆ ಈ ಮಹಾಪರಮಾರ್ಥವು ಅನಂತವಾಗಿ ಅಪಾರವಾಗಿ ಅರಿವಿನ ಗಟ್ಟಿಯೇ ಆಗಿರುತ್ತದೆ. ಈ ಭೂತಗಳಿಂದ ಮೇಲಕ್ಕೆದ್ದು ಅವುಗಳನ್ನನುಸರಿಸಿ ತಾನೂ ನಾಶವಾಗಿಬಿಡುತ್ತದೆ. ಇವುಗಳನ್ನು ಬಿಟ್ಟುಹೋದ ಮೇಲೆ ಅದಕ್ಕೆ ವಿಶೇಷಸಂಜ್ಞೆಯಿರುವದಿಲ್ಲ. ಇದೇ ನಾನು ಹೇಳುವದು'' ಎಂದು ಯಾಜ್ಞವಲ್ಕ್ಯನು ಹೇಳಿದನು.

ಉಪ್ಪಿನ ಹರಳು ನೀರಿನಿಂದ ಹುಟ್ಟಿರುತ್ತದೆ. ಬಿಸಿಲಿನ ಸಂಪರ್ಕದಿಂದ ನೀರು ಗಟ್ಟಿಯಾಗಿ ಹರಳಾಗಿರುತ್ತದೆ. ಆದರೆ ನಿಜವಾಗಿ ಆಗ ನೀರು ಬೇರೆ ಯಾಗಿರುವದಿಲ್ಲ, ಆಗಲೂ ತನ್ನ ಸ್ವರೂಪದಿಂದಲೇ ಇರುತ್ತದೆ. ಉಪ್ಪಿನ ಹರಳು ನೀರಿಗಿಂತ ಬೇರೆಯಾದ ಸ್ವರೂಪದ ವಸ್ತುವಿನ ಕಾರ್ಯವೆಂದು ತಿಳಿಯುವವರು ಇಲ್ಲಿ ನೀರು, ಮಂಜುಗಡ್ಡೆ ; ಸಕ್ಕರೆಯ ಪಾಕ, ಕಲ್ಲುಸಕ್ಕರೆ - ಇಂಥ ದೃಷ್ಟಾಂತಗಳನ್ನು ತೆಗೆದುಕೊಳ್ಳಬಹುದು. ದೃಷ್ಟಾಂತದಲ್ಲಿ ಉಪ್ಪಿನ ಹರಳು, ಅಥವಾ ಮಂಜುಗಡ್ಡೆಯು ಬೇರೊಂದು ರೂಪವನ್ನು ತಳೆದಂತೆ ತೋರುತ್ತಿದ್ದರೂ ಹೇಗೆ ತನ್ನ ನಿಜವಾದ ಸ್ವರೂಪವಾದ ನೀರೆಂಬ ರೂಪವನ್ನು ಇಟ್ಟುಕೊಂಡೇ ಇರುವದೋ ಇದರಂತೆ ನಾವು ಮಹಾಸಮುದ್ರದ ನೀರಿನಂತಿರುವ ಪರಮಾತ್ಮನಿಂದ ಹೊರಕ್ಕೆ ಬಂದ ಚೈತನ್ಯದ ಗಡ್ಡೆ ಗಳಾಗಿರುವೆವು. ಅಜ್ಞಾನದಿಂದ ನಾವು ಈಗ ಬೇರೆಬೇರೆಯಾಗಿ ತೋರುತ್ತಿದ್ದರೂ ಮಂಜಿನ ಗಡ್ಡೆಯು ನಿಜವಾಗಿ ನೀರೇ ಆಗಿರುವಂತೆ ಪರಮಾತ್ಮನೆಂಬ ಚಿದಾನಂದಸಾಗರವೇ ಈ ನಮ್ಮ ರೂಪದಿಂದಲೂ ತೋರಿ ಕೊಳ್ಳುತ್ತಿರುವದು. ನಿಜವನ್ನು ತಿಳಿದಮೇಲೆ ನಾನು, ನೀನು, ಅವನು - ಎಂಬ ಭೇದವಿಲ್ಲದೆ ಎಲ್ಲವೂ ಆ ಚಿದಾನಂದಸಾಗರವೇ ಆಗಿರುತ್ತದೆ.

-----------

# ೧೩. ನದಿಗಳು, ಸಮುದ್ರ

(ಮುಂಡಕ)

ವ್ಯವಹಾರದಲ್ಲಿ ಜೀವರು ಬಗೆಬಗೆಯ ನಾಮರೂಪಗಳಿಂದ ಕಂಗೊಳಿಸುತ್ತಿರುವರು. ಒಬ್ಬೊಬ್ಬರು ಒಂದೊಂದು ವ್ಯವಹಾರವನ್ನು ಕೈಗೊಂಡಿರುವರು. ಹೀಗೆ ಮೇಲೆಮೇಲೆ ನೋಡಿದರೆ ಒಬ್ಬರಿಗೊಬ್ಬರಿಗೆ ಯಾವ ಸಂಬಂಧವೂ ಇಲ್ಲವೆಂದೇ ತೋರುತ್ತದೆಯಾದರೂ ನಿಜವಾಗಿ ಅವರೆಲ್ಲರೂ ಕೊನೆಗೆ ಪರಮಾತ್ಮನೊಬ್ಬನನ್ನೇ ಸೇರತಕ್ಕವರಾಗಿರುತ್ತಾರೆ. ಈ ಅಭಿಪ್ರಾಯವನ್ನು ತಿಳಿಸುವದಕ್ಕೆ ಮುಂಡಕೋಪನಿಷತ್ತಿನಲ್ಲಿ ನದೀಸಮುದ್ರ ದೃಷ್ಟಾಂತವನ್ನು ಕೊಟ್ಟಿರುತ್ತದೆ.

'ನದಿಗಳು ಹೇಗೆ ಹರಿದು ಕೊನೆಗೆ ತಮ್ಮ ಹೆಸರು, ರೂಪ - ಎರಡನ್ನೂ ಬಿಟ್ಟು ಸಮುದ್ರದಲ್ಲಿಯೇ ಸೇರಿ ಕಾಣದಂತಾಗುವವೋ ಅದರಂತೆ ಜ್ಞಾನಿಯಾದವನು ತನ್ನ ನಾಮರೂಪಗಳನ್ನು ಬಿಟ್ಟು ಎಲ್ಲಕ್ಕೂ ಹೆಚ್ಚಿನ ದಿವ್ಯಪುರುಷನನ್ನು ಸೇರುವನು. ಯಾವಾತನು ಆ ಪರಬ್ರಹ್ಮವನ್ನು ತಿಳಿಯುತ್ತಾನೋ ಅವನು ಬ್ರಹ್ಮವೇ ಆಗಿರುತ್ತಾನೆ. ಅವನ ಕುಲದಲ್ಲಿ ಬ್ರಹ್ಮವನ್ನರಿಯದವನು ಹುಟ್ಟುವದಿಲ್ಲ, ಅವನು ಶೋಕವನ್ನು ದಾಟುತ್ತಾನೆ, ಪಾಪವನ್ನು ದಾಟುತ್ತಾನೆ ; ಅವನು ಹೃದಯದ ಗಂಟುಗಳನ್ನೆಲ್ಲ ಬಿಡಿಸಿಕೊಂಡು ಅಮೃತನಾಗುತ್ತಾನೆ.'

ನಾಮರೂಪಗಳು ಬರಿಯ ತೋರಿಕೆ ; ನಿಜವಾಗಿ ನಾವು ನಾಮರೂಪ ರಹಿತ ಪರಬ್ರಹ್ಮಸ್ವರೂಪರೇ.

---

# VI ಉಪಸಂಹಾರ

ಉಪನಿಷತ್ತುಗಳಲ್ಲಿ ಹೇಳಿರುವ ವಿಷಯಗಳನ್ನೂ ಅವನ್ನು ತಿಳಿಸಿರುವ ಕ್ರಮವನ್ನೂ ಸ್ವಲ್ಪಮಟ್ಟಿಗೆ ಹಿಂದಿನ ಪುಟಗಳಲ್ಲಿ ತಿಳಿಸಿರುತ್ತದೆ. ಉಪನಿಷತ್ತುಗಳಲ್ಲಿ ಹೇಳಿರುವ ತತ್ತ್ವವನ್ನೆಲ್ಲ ಇಷ್ಟರಲ್ಲಿ ಪ್ರತಿಪಾದನೆ ಮಾಡುವದು ಯಾರಿಗೂ ಶಕ್ಯವಲ್ಲ; ಇದು ನಮ್ಮ ಉದ್ದೇಶವೂ ಅಲ್ಲ.

ಲೋಕದಲ್ಲಿರುವ ಮಿಕ್ಕ ಮತಗ್ರಂಥಗಳಿಗೂ ಉಪನಿಷತ್ತುಗಳಿಗೂ ಇರುವ ಒಂದು ಮುಖ್ಯತಾರತಮ್ಯವನ್ನು ಈ ಸಣ್ಣ ಪುಸ್ತಕದಿಂದಲೂ ಓದುಗರು ಕಂಡುಕೊಳ್ಳಬಹುದಾಗಿರುತ್ತದೆ. ಅದೇನೆಂದರೆ : ಪರಮಾತ್ಮನು ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿರುತ್ತಾನೆ, ಎಲ್ಲಾ ಮನುಷ್ಯರಿಗೂ ಉಪಾಸ್ಯನಾಗಿರುತ್ತಾನೆ; ಎಲ್ಲರೂ ಅವನ ಸ್ವರೂಪವನ್ನು ಅರಿತುಕೊಂಡು ಕೃತಕೃತ್ಯರಾಗಬಹುದು ಎಂಬುದೇ ಉಪನಿಷತ್ತುಗಳ ಮುಖ್ಯವಾದ ಉಪದೇಶವಾಗಿರುತ್ತದೆ. ಪರಮೇಶ್ವರನು ಯಾವದಾದರೊಂದು ಕಾಲದ, ಯಾವದಾದರೊಂದು ದೇಶದ, ಯಾವದಾದರೊಂದು ಜನಾಂಗದ ಸ್ವತ್ತಲ್ಲ. ಆತನು ಯಾರನ್ನೂ ತನ್ನಿಂದ ಹೊರಚ್ಚುಮಾಡಿಲ್ಲ, ಯಾರೊಬ್ಬರನ್ನೂ ತನ್ನ ಮೆಚ್ಚಿನ ಜನರೆಂದು ಆರಿಸಿಕೊಂಡಿಲ್ಲ. ಒಳ್ಳೆಯ ನಡೆಯವರಾಗಿದ್ದು ತನ್ನನ್ನೇ ಅರಿಯಬೇಕೆಂದು ಯಾರು ಯಾರು ಆತನನ್ನು ಶರಣುಹೋಗುವರೋ ಅವರಿಗೆಲ್ಲ ಆತನು ತನ್ನ ಸ್ವರೂಪವನ್ನು ಪ್ರಕಟಿಸುವನು. ಅವನು ಗ್ರಂಥ, ಪ್ರವಚನಶಕ್ತಿ, ಮೇಧಾಶಕ್ತಿ-ಮುಂತಾದವುಗಳನ್ನು ಬಯಸುವದಿಲ್ಲ; ಪರಮೇಶ್ವರನೇ ತನಗೆ ಬೇಕೆಂಬ ಬಲವಾದ ಇಚ್ಛೆಯೊಂದನ್ನೇ ಆತನು ಅಪೇಕ್ಷಿಸುತ್ತಾನೆ.

(ಮುಂಡಕೋಪನಿಷತ್ತು).

ಉಪನಿಷತ್ತುಗಳನ್ನು ಓದುವವರು ಏನನ್ನೂ ನಂಬಬೇಕಾದದ್ದಿಲ್ಲ. ಅವುಗಳಲ್ಲಿ ಹೇಳಿರುವ ವಿಚಾರವು ನಮ್ಮೆಲ್ಲರ ಅನುಭವದಮೇಲೆಯೇ ನಿಂತಿರುತ್ತದೆ. ತಂದೆಯು ಮಗನಿಗೆ, ಗಂಡನು ಹೆಂಡತಿಗೆ, ಗುರುವು ಶಿಷ್ಯನಿಗೆ, ರಾಜನು ಪ್ರಜೆಗೆ - ಹಿತಬುದ್ಧಿಯಿಂದ ಹೇಳಿದ ಉಪದೇಶಗಳು ಅವುಗಳಲ್ಲಿವೆ; ಎಲ್ಲರೂ ತಿಳಿಯುವ ದೃಷ್ಟಾಂತಗಳಿಂದ ಆ ಉಪದೇಶಗಳನ್ನು ಅವು ಸ್ಪಷ್ಟ

ಪಡಿಸುತ್ತವೆ. ಈ ವಿಷಯಗಳನ್ನು ಮತ್ತಷ್ಟು ಸ್ಪಷ್ಟಪಡಿಸಿ **ಭಗವದ್ಗೀತೆ**ಯಲ್ಲಿ ಶ್ರೀಕೃಷ್ಣನು ಉಪದೇಶಮಾಡಿರುತ್ತಾನೆ. ಅವುಗಳನ್ನು ಯುಕ್ತಿಗೂ ಅನುಭವಕ್ಕೂ ಹೊಂದಿಸಿ ಬಾದರಾಯಣರು **ಬ್ರಹ್ಮಸೂತ್ರ**ಗಳಲ್ಲಿ ಸಿದ್ಧಾಂತಮಾಡಿರುತ್ತಾರೆ. ಭಾಷ್ಯಕಾರರು ಇವೆರಡನ್ನೂ ವಿವರಿಸಿರುತ್ತಾರೆ. ಆದ್ದರಿಂದ ಈ ಅಭಿಪ್ರಾಯವನ್ನು ಮತ್ತಷ್ಟು ವಿವರವಾಗಿ ತಿಳಿದುಕೊಳ್ಳಬೇಕೆಂಬವರ ಮನಸ್ಸಿನ ಹಸಿವನ್ನು ಅಡಗಿಸುವದಕ್ಕೆ ಬೇಕಾದಷ್ಟು ಆಹಾರಗಳು ಸಿದ್ಧವಾಗಿರುತ್ತವೆ.

ಉಪನಿಷತ್ತುಗಳು ಇಡಿಯ ಭೂಲೋಕಕ್ಕೇ ಮಾನ್ಯವಾದ ಗ್ರಂಥಗಳಾದರೂ ಭರತಖಂಡದವರಾದ ಹಿಂದುಗಳಿಗೆ ಅವು ಪರಮಪೂಜ್ಯವಾಗಿರುತ್ತವೆ. ಹಿಂದುಗಳೆಂಬುದು ಆ ಜನರ ಹೆಸರಲ್ಲ ; ಸನಾತನಾರ್ಯರು, ವೈದಿಕಮತಾನುಯಾಯಿಗಳು - ಎಂಬುದೇ ಅವರ ಹೆಸರು. ಯಾರೋ ಕಾರಣಾಂತರದಿಂದ ಅವರಿಗೆ ಹಿಂದುಗಳೆಂದು ಹೆಸರಿಟ್ಟರು. ಈಗ ಹಿಂದುಗಳೆಂದು ನಾವು ಕರೆದುಕೊಂಡರೂ ಚಿಂತೆಯಿಲ್ಲ, ಧರ್ಮವಿಚಾರದಲ್ಲಿಯೂ ತತ್ತ್ವವಿಚಾರದಲ್ಲಿಯೂ ನಾವು ಎಂದಿಗೂ ಹಿಂದಾಗಬಾರದು. ನಮ್ಮ ದೇಶದ ಋಷಿಗಳು ಈ ವಿಷಯದಲ್ಲಿ ಎಲ್ಲರಿಗಿಂತಲೂ ಮುಂದು. ಅವರ ವಂಶದವರಾದ ನಾವು ಉಪನಿಷತ್ತುಗಳಲ್ಲಿ ಏನಿದೆಯೆಂಬುದನ್ನು ಸಂಸ್ಕೃತದಲ್ಲಿ ತಿಳಿಯಲಾರದೆ ಇದ್ದರೆ ದೇಶಭಾಷೆಗಳ ಅನುವಾದದಲ್ಲಿಯಾದರೂ ಓದಬೇಕು. ಇಂಥ ಬಲವಾದ ಆಶೆಯುಳ್ಳ ಹಿಂದುಗಳಿಗಾಗಿಯೇ ಈ ಗ್ರಂಥವನ್ನು ನಾವು ಬರೆದಿದೇವೆ. ಇದನ್ನು ಓದಿ ಮೂಲಗ್ರಂಥಗಳನ್ನು ಇನ್ನೂ ವಿವರವಾಗಿ ತಿಳಿಯಬೇಕೆಂಬ ಕುತೂಹಲವನ್ನು ವಾಚಕರು ತೊಟ್ಟರೆ ನಾವು ಧನ್ಯರು.

---------

ವಿನೋದ ಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿ ಒದಗಿಸುವ ಕಥೆಗಳು.

೧. **ವಿಲಕ್ಷಣಮೌನಿ** : ಅರುಣಗಿರಿ (ಕೆ. ಕೃಷ್ಣಸ್ವಾಮಿ ಅಯ್ಯರ್) ಯವರು ಬರೆದಿರುವ ಸಂಭಾಷಣಾರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾ ತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರ ವೆಂಬುದನ್ನು ಮನಗಾಣಿಸುವ ಗ್ರಂಥವಿದು. **ನಾಲ್ಕನೆಯ ಮುದ್ರಣ : 1995, ಪುಟಗಳು ಕ್ರೌ.** **4 +20**

೨. **ಸಮುದ್ರ ಮಥನ** : ದೇವತೆಗಳೂ ರಾಕ್ಷಸರೂ ಕೂಡಿ ಕ್ಷೀರಸಮುದ್ರವನ್ನು ಮಥನಮಾಡಿ ಅಮೃತವನ್ನು ಪಡೆದುಕೊಂಡ ಪೌರಾಣಿಕ ಕಥೆಯಿದು. ಸಮಯಕ್ಕೆ ತಕ್ಕಂತೆ ನೀತಿಯನ್ನೂ ಅಧ್ಯಾತ್ಮ ಶಾಸ್ತ್ರದ ಗುಟ್ಟನ್ನೂ ವಿವರಿಸುತ್ತದೆ.

**ಮೂರನೆಯ ಮುದ್ರಣ : 1986, ಪು. ಕ್ರೌ. 4 + 72**

೩. **ವೇದಾಂತ ಕಥಾವಳಿ** : ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೊನೆಯಲ್ಲಿ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹುಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತ ವಿಷಯದ ಎಷ್ಟೋ ತಪ್ಪು ತಿಳಿವಳಿಕೆಗಳನ್ನು ಇದನ್ನು ಓದುವದರಿಂದ ಮಾಯುವಾಗುವವು. ಮೊದಲನೆಯ ಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ.

**ಆರನೆಯ ಮುದ್ರಣ : 2001, ಪು.ಕ್ರೌ. 4 + 52.**

೪. **ರಸನಿಮಿಷಗಳು** : ಮಾನವ ಜೀವನವು ಆನಂದಮಯವಾಗಿರುವುದಕ್ಕೆ ಅನುಸಂಧಾನ ಮಾಡಬೇಕಾಗಿರುವ ತತ್ತ್ವಗಳನ್ನು ಉದಾಹರಣೆಗಳ ಮೂಲಕ ಮನೋಹರವಾಗಿ ವರ್ಣಿಸಿದೆ. ಇವುಗಳನ್ನು ಓದುವಾಗ ವಾಚಕರಿಗೆ ಒಂದೊಂದು ನಿಮಿಷವೂ ರಸಮಯವಾಗಿರುವದೆಂಬದರಲ್ಲಿ ಸಂದೇಹವಿಲ್ಲ. ಶ್ರೀಶ್ರೀಗಳವರು **ಅಧ್ಯಾತ್ಮ ಚಿಂತನೆ** ಎಂಬ ಹೆಸರಿನಿಂದ ಹುಬ್ಬಳ್ಳಿಯ **ಕರ್ಮವೀರ** ಮಾಸಪತ್ರಿಕೆಗೆ ಬರೆದಿದ್ದ ಇಪ್ಪತ್ತಾರು ಸಣ್ಣ ಅಧ್ಯಾತ್ಮ ಲೇಖನಗಳ ಸಂಗ್ರಹವಿದು.

**ಐದನೆಯ ಮುದ್ರಣ : 1998, ಪು. ಕ್ರೌ. 4 + 48**

೫. **ಉಪನಿಷತ್ತುಗಳ ಮೊದಲನೆಯ ಪರಿಚಯ** : ಅಧ್ಯಾತ್ಮ ವಿದ್ಯೆಯ ಬೊಕ್ಕಸವಾಗಿರುವ ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯ ಸಂಪ್ರದಾಯಾನುಸಾರವಾಗಿ ವಿಚಾರಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮವಾದ ಪುಸ್ತಕವಿದು. ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳಲ್ಲಿ, ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ನಿರೂಪಿಸಿದೆ. ಈಗ ಇದು ನಿಮ್ಮ ಕೈಯಲ್ಲಿದೆ. **ನಾಲ್ಕನೆಯ ಮುದ್ರಣ : 1995, ಪು. ಕ್ರೌ. 6+ 54**



# ಸಂಸ್ಥಾಪಕರ ಸ್ಮರಣೆ

ಕರ್ನಾಟಕರಾಜ್ಯದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯ ಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್ ಎಂದಿತ್ತು. 1948 ರವರೆಗೆ (68 ನೆಯ ವಯಸ್ಸಿನವರೆಗೆ) ಅವರು **ಸುಬ್ರಾಯ**ರೆಂದೇ ಪ್ರಖ್ಯಾತರಾಗಿದ್ದರು. 10. 6. 1948 ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶ ಕಾರ್ಯಾಲಯವು** ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ **ಅಭಿನವಶಂಕರಾಚಾರ್ಯ**ರಾಗಿ ಬಾಳಿ 1975ನೇ ಆಗಸ್ಟ್ 5 (1880-1975) ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

---

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**

**"ಓಂ ನಮೋ ಭಗವತೇ ಸಚ್ಚಿದಾನಂದಾಯ"**